ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 13 ಸಂಚಿಕೆ 2 ಫೆಬ್ರವರಿ 2016 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಡಿಸೆಂಬರ್ 2011ರ ಸಂಚಿಕೆ)

ವರ್ಷವು ಕೊನೆಗೊಳ್ಳುತ್ತಿದೆ. ಹೊಸ ವರ್ಷ ಹತ್ತಿರ ಬಂದು ಕಾಯುತ್ತಿದೆ. ಜೊತೆಗೆ ದೊಡ್ಡ ಸ್ಥಿತ್ಯಂತರ ಕಾದಿದೆ. ಪ್ರಜ್ಞೆಯ ಸ್ಥಿತ್ಯಂತರ.

ಸ್ಥಿತ್ಯಂತರದ ಬಗ್ಗೆ ಮೊದಲೇ ಭವಿಷ್ಯ ನುಡಿಯಲಾಗಿತ್ತು ಹಾಗೂ ಅದರ ಬಗ್ಗೆ ಬಹು ನಿರೀಕ್ಷೆಯೂ ಇತ್ತು. ಪ್ರಗತಿ ಹೊಂದುತ್ತಿರುವ ಪರಿವರ್ತನೆಯ ಪ್ರಕ್ರಿಯೆಯನ್ನು ವೀಕ್ಷಿಸುತ್ತಿರುವ ಅನುಭಾವಿ ಬೆಳಕಿನ ಕಾರ್ಯಕರ್ತರು ಸ್ಥಿತ್ಯಂತರವನ್ನು ಗಮನಿಸಿದ್ದಾರೆ ಅಲ್ಲದೆ ಅದರ ಪರಿಣಾಮವನ್ನು ನಿರೀಕ್ಷಿಸುತ್ತಿದ್ದಾರೆ.

ಅಂತಹ ದೊಡ್ಡದಾದ ವಿನಾಶವೇನೂ ಸಂಭವಿಸಲಿಲ್ಲ. ದಿವ್ಯ ಕಾರ್ಯಕರ್ತರು ಅದನ್ನು ನಿರೀಕ್ಷಿಸಿರಲೂ ಇಲ್ಲ. ಪರಿಣಾಮವು ಹಠಾತ್ತಾದ ಏಕಕಾಲಿಕ ಘಟನೆಯಾಗಿರುವುದಿಲ್ಲ. ಅದು ಕಾಲಕ್ರಮೇಣದಲ್ಲಿ ಹಲವಾರು ತಿಂಗಳುಗಳ ಅಂತರದಲ್ಲಿ ಆಗುತ್ತದೆ. ಅದರ ಆರಂಭವನ್ನು ಜಾಗರೂಕ ವೀಕ್ಷಕರು ಗಮನಿಸಬಲ್ಲರು.

ಸ್ಥಿತ್ಯಂತರವು ಜನರಲ್ಲಿ ಮತ್ತಷ್ಟು ಅರಿವನ್ನು ತರುತ್ತದೆ. ಮೌಲ್ಯಗಳು ನಶಿಸಿಹೋಗುತ್ತಿರುವುದೇ ನಮ್ಮೆಲ್ಲ ಸಮಸ್ಯೆಗಳಿಗೆ ಮೂಲ ಕಾರಣ ಎಂಬ ವಾಸ್ತವತೆಯನ್ನು ನಾವು ಅರಿತುಕೊಳ್ಳುತ್ತಿದ್ದೇವೆ. ಜಗತ್ತಿನಲ್ಲಿ ಭ್ರಷ್ಟರ ಆಳ್ವಿಕೆಯನ್ನು ನೋಡಿ ನಾವು ಅಸಹಿಷ್ಣುಗಳಾಗುತ್ತೇವೆ, ಜುಗುಪ್ಸೆಪಟ್ಟುಕೊಳ್ಳುತ್ತೇವೆ. ನಾವು ಪ್ರತಿರೋಧಿಸುತ್ತ ಬೀದಿಗೆ ಬರದಿರಬಹುದು. ಆದರೆ ನಾವೆಲ್ಲರೂ ಕೇವಲ ರಾಜಕಾರಣ ಮತ್ತು ಆಳ್ವಿಕೆಯಲ್ಲಾಗುವ ಭ್ರಷ್ಟಾಚಾರವನ್ನಲ್ಲದೆ ಯಾವುದೇ ಕ್ಷೇತ್ರದಲ್ಲಾಗುವ ಮೌಲ್ಯಗಳ ನಾಶವನ್ನೂ ತಿರಸ್ಕರಿಸುತ್ತೇವೆ; ಅಂದರೆ ಶಿಕ್ಷಣ, ವೈದ್ಯಕೀಯ, ಧರ್ಮ, ಹೊಸ ಯುಗದ ವ್ಯವಹಾರ... ಮುಂತಾದ ಎಲ್ಲೆಡೆಯೂ. ಹೀಗೆ ತಿರಸ್ಕರಿಸಿದಾಗ ಅದರ ತರಂಗಗಳು ಚೈತನ್ಯಗಳ ಬೃಹತ್ ಕ್ಷೇತ್ರಗಳನ್ನು ಹುಟ್ಟುಹಾಕಿ, ಸೂಕ್ಷ್ಮಮಟ್ಟಗಳಲ್ಲಿ ಪರಿಣಾಮವನ್ನುಂಟು ಮಾಡುತ್ತವೆ. ಅದರ ಪರಿಣಾಮವನ್ನು ನಾವು ಭೌತಿಕ ಮಟ್ಟದಲ್ಲೂ ಕಾಣಬಹುದು. ಪ್ರಳಯ ಕೆಲಸ ಮಾಡುವುದು ಹೀಗೇ. ಪ್ರಳಯವೆಂದರೆ ನಾಶವಲ್ಲ, ಬದಲಾವಣೆ; ಪರಿವರ್ತನೆ. ಇದು ಹೆಚ್ಚಾಗಿ ಕೆಲಸ ಮಾಡುವುದು ಸೂಕ್ಷ್ಮಮಟ್ಟದಿಂದ.

ನಮ್ಮ ಹಿಂದಿನ ತಪ್ಪುಗಳಿಗೆ "ಕ್ಷಮಿಸಿ" ಎಂದು ಹೇಳುವುದಕ್ಕೆ ಸ್ಥಿತ್ಯಂತರವು ಒಂದು ಸದವಕಾಶವೂ ಹೌದು. ಆಗ ನಾವು ಕ್ಷಮಿಸಲ್ಪಡುತ್ತೇವೆ! ವಿಶ್ವದಿಂದ, ಅವತಾರಿಯಿಂದ ಮತ್ತು ದ್ವಿತೀಯಾಗಮನದ (Second Coming) ಭಗವಂತನಿಂದ ಕ್ಷಮಿಸಲ್ಪಡುತ್ತೇವೆ. ಇದನ್ನು ನಾವು ತೀರ್ಪಿನ ದಿನ (Jaudgement Day) ಎಂದು ಕರೆಯಬಹುದು. ದಿನವೆಂದರೆ ಒಂದು ದಿವಸವಲ್ಲ ಒಂದು ಅವಧಿ. ತೀರ್ಪು ಅಂದರೆ ಶಿಕ್ಷೆ ಕೊಡುವುದಲ್ಲ. ತೀರ್ಪು ಅಂದರೆ ನಮ್ಮನ್ನು ಕ್ಷಮಿಸಿ, ನಮಗೆ ಪ್ರೀತಿಯನ್ನು ಅನುಭವಿಸುವ ಅವಕಾಶ ಕೊಡುವುದು. ಸ್ಥಿತ್ಯಂತರವು ಪ್ರೇಮ ಚೈತನ್ಯಗಳ ಪ್ರವಾಹವನ್ನೇ ತರುತ್ತದೆ. ಇಲ್ಲಿ ನಾವು ಎಂದೂ ಮುಳುಗದೆ, ತೇಲುತ್ತೇವೆ.

ಸ್ಥಿತ್ಯಂತರವು ವಿಶ್ವದ ಅನುಗ್ರಹ. ನಮಗೆಲ್ಲರಿಗೂ ಅದರ ಇರುವಿಕೆಯ ಅರಿವು ನೇರವಾಗಿ ಆಗದಿರಬಹುದು; ಆದರೂ ಪರವಾಗಿಲ್ಲ. ನಾವು ಅರಿಯುವುದೂ ಬೇಕಿಲ್ಲ. ಅದರೂ ಅದು ತನ್ನ ಕೆಲಸ ಮಾಡುತ್ತದೆ. ಅದು ಬಹು ಮುಖ್ಯ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



6ನೇ ವಿಶ್ವ ಚಾನಲ್ಸ್ ದಿನವಾದ 01-02-2016 ರಂದು ಶಾಲೆಗಳಲ್ಲಿ ಮಾಡಬೇಕಾಗಿರುವ ಕೆಲಸವನ್ನು ಚರ್ಚಿಸಲು ಮತ್ತು ಏರ್ಪಾಡುಮಾಡಲು 10-01-2016 ರಂದು ಲೈಟ್ ಚಾನಲ್ ಕಾರ್ಯಕರ್ತರು ತಪೋನಗರದಲ್ಲಿ ಸೇರಿದ್ದರು.

## ಸುದ್ದಿ-ಸೂಚನೆ

- 01-02-2016ನೇ ಸೋಮವಾರದಂದು ವಿಶ್ವ ಚಾನಲ್ಸ್ ದಿನವನ್ನು ಆಚರಿಸಲಾಗುತ್ತದೆ. ಆ ದಿನ ಸಾವಿರಾರು ಶಾಲೆಗಳಿಂದ ಸುಮಾರು ಒಂದು ಮಿಲಿಯನ್ ಮಕ್ಕಳು ಲೈಟ್ ಚಾನಲ್ ಮಾಡುತ್ತಾರೆ. ಅಂದು ನಿಮ್ಮ ಸ್ಥಳದಿಂದಲೇ ನಿಮಗೆ ಅನುಕೂಲವಾಗುವ ಯಾವುದೇ ಸಮಯದಲ್ಲಿ 7 ನಿಮಿಷಗಳಕಾಲ ಲೈಟ್ ಚಾನಲ್ ಮಾಡುವ ಮೂಲಕ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರುತ್ತೇವೆ.
- 7-2-2016ರಂದು ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ನಿಮಗೆಲ್ಲರಿಗೂ ಈ ವಿಶೇಷ ಕಾರ್ಯಕ್ರಮಕ್ಕೆ ಆದರದ ಸ್ವಾಗತ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು, 4-2-2016 ರೊಳಗೆ ತಮ್ಮ ಹೆಸರನ್ನು ಮಾನಸ ಆಫೀಸಿನಲ್ಲಿ ನೋಂದಾಯಿಸಬೇಕೆಂದು ಕೋರುತ್ತೇವೆ.
- 10-01-2016ರಂದು ನಡೆದ ಶಂಬಲ ಗ್ರೂಪ್‌ನ ವಿಶೇಷ ಧ್ಯಾನದಲ್ಲಿ 150ಕ್ಕೂ ಹೆಚ್ಚು ಸಾಧಕರು ತಪೋನಗರದಲ್ಲಿ ಮತ್ತು ಸುಮಾರು ನೂರಕ್ಕೂ ಹೆಚ್ಚು ಜನರು ತಮ್ಮ ತಮ್ಮ ಸ್ಥಳಗಳಿಂದಲೇ ವೆಬ್‌ಕಾಸ್ಟ್ ಮೂಲಕ ಭಾಗವಹಿಸಿದ್ದರು. ಹಾಗೂ ಶಂಬಲ ಮಾಸ್ಟರ್ಸ್ ಇವರೆಲ್ಲರಿಗೂ ಸೂಕ್ಷ್ಮಮಟ್ಟದಲ್ಲಿ ದೀಕ್ಷೆ ನೀಡಿದರು.
- 17-01-2016ರಂದು 2016ನೇ ಇಸವಿಯ ಮೊದಲ 'ರಾ' ಗ್ರೂಪ್ ಮೀಟಿಂಗ್ ನಡೆಯಿತು.
- ನಮ್ಮ ದೂರವಾಣಿ ಸಂಖ್ಯೆ (080) 28465280 ಸದ್ಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ನಮ್ಮನ್ನು ಸಂಪರ್ಕಿಸಲು ದಯವಿಟ್ಟು 9900075280 ಸಂಖ್ಯೆ ಅಥವಾ ಪರ್ಯಾಯವಾಗಿ 9663318005 ಸಂಖ್ಯೆಯನ್ನು ಬಳಸಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಸೋಮ | ಅಮರ ಜಯಂತಿ<br>ಕೃಷ್ಣ ಅಷ್ಟಮಿ<br>ವಿಶ್ವ ಚಾನಲ್ಸ್ ದಿನ |
| 07 | ಭಾನು | ಅಮರ ಜಯಂತಿ ಕಾರ್ಯಕ್ರಮ<br>ಮಾಸ ಶಿವರಾತ್ರಿ |
| 08 | ಸೋಮ | ಅಮಾವಾಸ್ಯೆ |
| 15 | ಸೋಮ | ಶುಕ್ಲ ಅಷ್ಟಮಿ<br>ರಥ ಸಪ್ತಮಿ |
| 17 | ಬುಧ | ಶುಕ್ಲ ದಶಮಿ |
| 22 | ಸೋಮ | ಪೂರ್ಣಿಮೆ |

## ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು:ಉಪನ್ಯಾಸಗಳು: ಬೆಳಿಗ್ಗೆ 11-12
ಲೈಟ್ ಚಾನಲಿಂಗ್: ಮಧ್ಯಾಹ್ನ12-1
07-02-2016 ಅಮರ ಜಯಂತಿ ಕಾರ್ಯಕ್ರಮ

## ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ

### ಭಾನುವಾರ, 07-02-2016

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಆನೇಕಲ್‌ನಲ್ಲಿ ಕಾರ್ಯಕ್ರಮ

ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01-02-2016 ರಂದು ಬೆಳಿಗ್ಗೆ 11.30ಕ್ಕೆ ಆಚರಿಸಲಾಗುವುದು.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಸೇಂಟ್ ಜೋಸೆಫ್ಸ್ ಶಾಲೆಯಲ್ಲಿ ನಡೆದ ಒಂದು ರಿಟ್ರೀಟ್‌ಗೆ ದೇಶದೆಲ್ಲೆಡೆಯಿಂದ ಹಾಗೂ ವಿದೇಶಗಳಿಂದ ಕ್ರೈಸ್ತ ಸಂನ್ಯಾಸಿನಿಯರು ಬಂದಿದ್ದರು. ನಮ್ಮ ಗುರೂಜಿಯವರನ್ನು ಚೆನ್ನಾಗಿ ಬಲ್ಲ ಹಾಗೂ ಅವರೊಂದಿಗೆ ಧ್ಯಾನ ಮಾಡುವ ಅವಕಾಶವನ್ನು ಪಡೆದಿದ್ದ ಸಿಸ್ಟರ್ ರೋಸ್‌ಮೇರಿಯವರು ಅಲ್ಲಿನ ಪ್ರಾಂಶುಪಾಲರಿಗೆ ಲೈಟ್ ಚಾನಲಿಂಗ್ ಬಗ್ಗೆ ವಿವರಿಸಿದರು. ರಿಟ್ರೀಟ್‌ನ ಸಮಯದಲ್ಲಿ ಎಲ್ಲರೂ ಅರ್ಧ ಗಂಟೆಯ ಕಾಲ ಲೈಟ್ ಚಾನಲಿಂಗ್ ಮಾಡಿದರು ಮತ್ತು ತಮ್ಮ ತಮ್ಮ ಕಾರ್ಯಕ್ಷೇತ್ರಕ್ಕೆ ಹಿಂದಿರುಗಿದ ಮೇಲೆ ಅವರವರ ಶಾಲೆಗಳಲ್ಲಿ ಲೈಟ್ ಚಾನಲ್ ಮಾಡಲು ಅಲ್ಲಿ ಸೇರಿದ್ದ ಎಲ್ಲಾ ಸಂನ್ಯಾಸಿನಿಯರನ್ನು ಕೇಳಿಕೊಳ್ಳಲಾಯಿತು. 400 ಸಂನ್ಯಾಸಿನಿಯರು ಬೆಳಕನ್ನು ಚಾನಲ್ ಮಾಡಿದರು. "ಲೈಟ್ ಚಾನಲಿಂಗ್ ಸಂಚಲನವು ಎಲ್ಲೆಡೆ ಹರಡುತ್ತಿದೆ ಮತ್ತು ನಾನು ಇದರ ಒಂದು ಭಾಗವಾಗಿದ್ದೇನೆ ಹಾಗೂ ನಾನು ನಿಮ್ಮೊಂದಿಗೆ ಸದಾ ಇರುತ್ತೇನೆ" ಎಂದು ಸಿಸ್ಟರ್ ರೋಸ್‌ಮೇರಿ ಹೇಳುತ್ತಾರೆ.

– ಶೋಭನಾ ಕುಲೋತ್ತುಂಗನ್, ಕಾರ್ಯಕರ್ತೆ

ಹಿಂದಿನ ವಿಶ್ವ ಲೈಟ್ ಚಾನಲ್ಸ್ ದಿನದಂದು, ಬೆಂಗಳೂರಿನ ಉತ್ತರಹಳ್ಳಿಯಲ್ಲಿರುವ ವಿಶ್ವಭಾರತಿ ಶಾಲೆ ಮತ್ತು ಕಾಲೇಜಿನ ಪ್ರಾಂಶುಪಾಲರು, "ಈ ಲೈಟ್ ಚಾನಲಿಂಗ್ ತಂತ್ರವು ಅತ್ಯಂತ ಪರಿಣಾಮಕಾರಿ ಮತ್ತು ವಿಶ್ರಾಮದಾಯಕವಾಗಿದೆ. ನನಗೆ ಅತ್ಯಂತ ಸಂತೋಷವಾಗಿದೆ ಮತ್ತು ಇದಕ್ಕಾಗಿ ಕೃತಜ್ಞತೆಗಳು" ಎಂದು ಹೇಳಿದರು. "ನನಗೆ ಸೆಷನ್‌ನ ನಂತರ ಅತ್ಯಂತ ಆನಂದ ಮತ್ತು ಶಾಂತತೆಯ ಅನುಭವವಾಯಿತು. ನಮಗೆಲ್ಲರಿಗೂ ಜೀವನದಲ್ಲಿ ಈ ರೀತಿಯ ಒಂದು ತಂತ್ರದ ಅಗತ್ಯವಿದೆ ಮತ್ತು ನಾವಿದನ್ನು ಪ್ರತಿದಿನ ಅಭ್ಯಾಸ ಮಾಡುತ್ತೇವೆ," ಎಂದು ಪದವಿ ಕಾಲೇಜಿನ ಪ್ರಾಂಶುಪಾಲರು ಹೇಳಿದರು. ಚಿಕ್ಕಲಸಂದ್ರದ ಎಸ್.ವಿ.ಎಸ್. ಇ–ಟೆಕ್ನೋ ಶಾಲೆಯನ್ನು ಒಬ್ಬ ತಂದೆ ಮತ್ತು ಅವರ ಮೂರು ಹೆಣ್ಣುಮಕ್ಕಳು ನಡೆಸುತ್ತಾರೆ. ಆ ಮಕ್ಕಳಲ್ಲೊಬ್ಬರು, "ನಾವು ಸೆಷನ್‌ನಲ್ಲಿ ಹಾಗೂ ಕಾರ್ಯಕರ್ತರಲ್ಲಿ ಶಾಂತಿ ಮತ್ತು ಪ್ರೀತಿ ಇರುವುದನ್ನು ಅನುಭವಿಸಿದೆವು" ಎಂದು ಹೇಳಿದರು. ಸೆಷನ್‌ಗಳು ಅದ್ಭುತವಾಗಿದ್ದವು. ಇಡೀ ಕಾರ್ಯಕ್ರಮದಲ್ಲಿದ್ದ ಪ್ರೀತಿ ಮತ್ತು ಕಂಪನಗಳು ನನ್ನ ಅನುಭವಕ್ಕೆ ಬಂದವು. ಅಂದು ಸಮಯವು ಅತ್ಯಂತ ವೇಗವಾಗಿ ಕಳೆದರೂ ಮಾಸ್ಟರ್‌ಗಳಿಂದ ಮಹತ್ತರವಾದ ಚೈತನ್ಯ, ಆಶೀರ್ವಾದ ಮತ್ತು ಅನುಗ್ರಹವು ಸುರಿಯಲ್ಪಟ್ಟಿತು.

– ಅನಿತಾ ಕೆ.ಎ., ಕಾರ್ಯಕರ್ತೆ

ಕಳೆದ ವರ್ಷದ ವಿಶ್ವ ಲೈಟ್ ಚಾನಲಿಂಗ್ ದಿನದಂದು, ಒಂದು ಶಾಲೆಯಲ್ಲಿ ಸೆಷನ್ ನಡೆಯುತ್ತಿದ್ದ ವೇಳೆಯಲ್ಲಿ ಅತ್ಯಂತ ಶಾಂತತೆಯ ಅನುಭವ ನನಗಾಯಿತು. ಸಮಯ ನಿಂತುಹೋಗಿತ್ತು! ನಾನು ಸೆಷನ್ ನಡೆಸಿಕೊಟ್ಟ ನಂತರ ವಿದ್ಯಾರ್ಥಿಗಳು ಎರಡು ಬಾರಿ ಸೆಷನ್ ಅನ್ನು ಪುನರಾವರ್ತಿಸಿದರು. ಆದರೂ ಸಮಯ ಚಲಿಸಲಿಲ್ಲ. ನನಗೆ ಬೇರೆ ಶಾಲೆಯಲ್ಲಿ ಸೆಷನ್ ನಡೆಸಬೇಕಾಗಿದ್ದುದರಿಂದ ಆ ಶಾಲೆಯಿಂದ ಹೊರಬರಬೇಕಾಯಿತು.

– ಪವಿತ್ರಾ ಥಾಕೂರ್, ಕಾರ್ಯಕರ್ತೆ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

ಪ್ರತಿ ಬಾರಿ ತಪೋನಗರಿಗರನ್ನು ಒಂದು ಕಠಿಣ ಪರೀಕ್ಷೆಗೆ ಒಡ್ಡಿದಾಗ, ಅವರು ಚೇತರಿಕೆಯನ್ನು ತೋರಿದರು. ಕಾಲದ ಹುಚ್ಚಾಟಗಳ ನಡುವೆಯೂ, ಆಧ್ಯಾತ್ಮಿಕತೆಯ ಆಳವಾದ ಬೇರುಗಳು ಅವರನ್ನು ದೃಢವಾಗಿಟ್ಟಿವೆ. ತಮ್ಮ ವ್ಯಕ್ತಿತ್ವಗಳಲ್ಲಿ ಮತ್ತು ಅಭಿಪ್ರಾಯಗಳಲ್ಲಿ ಭಿನ್ನತೆಯಿದ್ದರೂ, ಸಪ್ತಋಷಿಗಳ ಈ ಮಾರ್ಗದೆಡೆಗಿನ ಬದ್ಧತೆಯಲ್ಲಿ ಭಾಗಿಯಾಗಿರುವುದರಿಂದ ಅದು ಎಲ್ಲರನ್ನೂ ಏಕತೆಯ ಮಾರ್ಗದಲ್ಲಿಟ್ಟಿದೆ.

ಡಿಸೆಂಬರ್ 31ರಂದು ತಪೋನಗರ ನಿವಾಸಿಗಳ ಕೂಟದಲ್ಲಿ ತಪೋನಗರಿಗರು ಹೊಸವರ್ಷವನ್ನು ಸ್ವಾಗತಿಸಿದರು. ನಿವಾಸಿಗಳೆಲ್ಲಾ ಸುಧಾಕರ್ ಸರ್‌ರವರ ಮನೆಯಲ್ಲಿ ಸೇರಿ, ಏಕತೆಯ ತಂತ್ರವನ್ನು ಅಭ್ಯಾಸಮಾಡಿದರು. ನಂತರ ಮಕ್ಕಳೆಲ್ಲರೂ ಪಟಾಕಿಗಳನ್ನು ಸಿಡಿಸಿ ಆನಂದಿಸಿದರು ಮತ್ತು ಕೊನೆಗೆ ಡೈನಿಂಗ್ ಹಾಲ್‌ನಲ್ಲಿ ರಾತ್ರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

2015ನೇ ಇಸವಿಯ ಕೊನೆಯ ಭಾನುವಾರವು ಹನ್ನೆರಡು ಗಂಟೆಗಳ ಕಾಲ ನಿರಂತರ ಲೈಟ್ ಚಾನಲಿಂಗ್ ಮಾಡುವ ದಿನವಾಗಿತ್ತು. ಅಂದು ಬೆಳಿಗ್ಗೆ 6 ಗಂಟೆಯಿಂದ ಧ್ಯಾನಿಗಳೆಲ್ಲ ಚಾನಲಿಂಗ್ ಮಾಡಲು ಆರಂಭಿಸಿದರು. ದಿನವಿಡೀ ಇತರರು ಬೇರೆಬೇರೆ ಸಮಯಗಳಲ್ಲಿ ಜೊತೆಗೂಡಿದರು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಹಾಗೂ ಸಾಯಂಕಾಲದ ಉಪಾಹಾರಗಳನ್ನು ಪೂರೈಸಲಾಯಿತು.

ಹೊಸವರ್ಷವು ಮುಂದೆ ಸಾಗಿದಂತೆ ತಪೋನಗರಿಗರು ಕಲಿಯುವುದನ್ನು ಮುಂದುವರೆಸಲು ಅನೇಕ ಪಾಠಗಳಿವೆ. ಗುರೂಜಿಯವರು ಬೋಧಿಸಿದಂತೆ, ಪ್ರಾಮಾಣಿಕ ಆತ್ಮವಿಮರ್ಶೆಯು ಸುಧಾರಣೆಯಾಗಬೇಕಾದ ವಲಯಗಳನ್ನು ತೋರಿಸುತ್ತದೆ ಮತ್ತು ಪರಿಪೂರ್ಣತೆಯು ನಿರಂತರವಾದ ಪ್ರಕ್ರಿಯೆ. ಗುರೂಜಿಯವರಿಂದ ಸ್ಥಾಪಿಸಲ್ಪಟ್ಟ ಆಡಳಿತ ವ್ಯವಸ್ಥೆಯನ್ನು ಗೌರವಿಸುವುದು ಹಾಗೂ ಅನುಸರಿಸುವುದು ಕಡ್ಡಾಯವಾಗಿದೆ. ತಪೋನಗರದಲ್ಲಿ ವಾಸಿಸುವುದು ಒಂದು ಅವಕಾಶ ಮತ್ತು ಒಂದು ಜವಾಬ್ದಾರಿ. ತಪೋನಗರಿಗರು ಈ ಪವಿತ್ರ ಸ್ಥಳವನ್ನು ಜ್ಞಾನೋದಯ ಹೊಂದಿದ ಸಮುದಾಯ ಜೀವನದ ಒಂದು ಮಾದರಿಯನ್ನಾಗಿಸುವ ಗುರೂಜಿಯವರ ಕನಸನ್ನು ನನಸಾಗಿಸುವೆಡೆಗಿನ ಪ್ರಯತ್ನವನ್ನು ಮುಂದುವರಿಸುತ್ತಾರೆ. 2016ನೇ ಇಸವಿಯು ಪ್ರತಿಯೊಬ್ಬರಲ್ಲಿರುವ ಅತ್ಯುತ್ತಮವಾದುದನ್ನು ಹೊರತರಲಿ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಮಾರ್ಚ್ 2005

ಜ್ಞಾನ ಒಳ್ಳೆಯದು – ಜೀವನದ ಬಗೆಗಿನ ಜ್ಞಾನ, ಆಧ್ಯಾತ್ಮಿಕ ವಾಸ್ತವಗಳು ಮತ್ತು ಸೃಷ್ಟಿಯ ಬಗೆಗಿನ ಜ್ಞಾನ. ಆದರೆ ಅಷ್ಟೇ ಸಾಲದು. ನಾವು ಸತ್ಯಗಳನ್ನಷ್ಟೇ ತಿಳಿದರೆ ಸಾಲದು ನಮಗದರ ಅನುಭವವಾಗಬೇಕು. ನಮಗೆ ಪ್ರೀತಿಯ ಬಗ್ಗೆ ತಿಳಿದಿರಬೇಕು ಮತ್ತು ಅದನ್ನು ಅನುಭವಿಸಲೂ ಬೇಕು. ಜ್ಞಾನದ ಮಟ್ಟದಲ್ಲಿಯೇ ನಾವು ನಿಲ್ಲಬಾರದು. ಅದನ್ನು ನಾವು ದಾಟಿ ಹೋಗಬೇಕು, ಅದನ್ನು ಅನುಭವಿಸಬೇಕು. ಆಗ ಮಾತ್ರ ಸತ್ಯಗಳಿಂದ ವಿವೇಕ, ಚೈತನ್ಯಗಳು ಮತ್ತು ಶಕ್ತಿಯನ್ನು ಪಡೆಯುತ್ತೇವೆ. ಆಗ ಮಾತ್ರವೇ ಎಲ್ಲ ಭಯಗಳಿಂದ ಮುಕ್ತರಾಗುತ್ತೇವೆ.

ಪವಾಡಗಳ ಬಗ್ಗೆ ಮಾತನಾಡುತ್ತೇವೆ. ಪವಾಡವೆಂದರೇನು? ತರ್ಕದಿಂದ ವಿವರಿಸಲಾಗದಿರುವುದೇ ಪವಾಡ. ಅದು ತರ್ಕವನ್ನು ಮೀರಿದ್ದು. ಪವಾಡವೆಂದಾಗ ನಾವು, ಏನಾದರೂ ವಸ್ತುವೊಂದನ್ನು ಎಲ್ಲಿಂದಲೋ ತಂದು ನಮ್ಮ ಮುಂದೆ ಪ್ರತ್ಯಕ್ಷಗೊಳಿಸುವಂತಹ ಅತಿ ಸಾಮಾನ್ಯ ವಿಷಯಗಳ ಬಗ್ಗೆ ಯೋಚಿಸುತ್ತೇವೆ. ಪ್ರತಿಯೊಬ್ಬರ ಜೀವನದಲ್ಲೂ ಅನೇಕ ಪವಾಡಗಳು ಸಂಭವಿಸುತ್ತವೆ. ಅದನ್ನು ನಾವು ಪರೀಕ್ಷಿಸಿಕೊಳ್ಳಬಹುದು. ಇದ್ದಕ್ಕಿದ್ದ ಹಾಗೆ ಸಮಸ್ಯೆಯೊಂದು ಬಗೆಹರಿಯುತ್ತದೆ, ವ್ಯಕ್ತಿಯೊಬ್ಬನಿಗೆ ಕೆಲಸ ಸಿಗುತ್ತದೆ, ಮದುವೆಯಾಗುತ್ತದೆ ಇತ್ಯಾದಿ. ಮೌನವಾಗಿ ನಡೆಯುವ ಈ ಪವಾಡಗಳು ಸಹಜವೇನೋ ಎಂಬಂತಿರುತ್ತವೆ. ಆದರೆ ಹೃದಯಾಂತರಾಳದಲ್ಲಿ ಅವುಗಳ ಹಿಂದೆ ಕಾಣದ ಕೈಯೊಂದು ಯಾವಾಗಲೂ ಕೆಲಸ ಮಾಡುತ್ತಿರುತ್ತದೆ ಮತ್ತು ಸಹಾಯ ಮಾಡುತ್ತಿರುತ್ತದೆಯೆಂದು ನಮಗೆ ತಿಳಿದಿರುತ್ತದೆ. ಈ ಕಾಣದ ಕೈ ಮತ್ತು ಸದ್ದಿಲ್ಲದ ಸಹಾಯಗಳಿಲ್ಲದಿದ್ದರೆ, ನಾವು ಈಗ ಇರುವ ನೆಮ್ಮದಿಯ ಮತ್ತು ಸಂತೋಷದ ಸ್ಥಿತಿಯಲ್ಲಿರಲಾಗುತ್ತಿರಲಿಲ್ಲ. ಪವಾಡಗಳಾದಾಗಲೆಲ್ಲ, ಪವಾಡದ ನಂತರ ನಾವು ಮಾಡಬೇಕಾಗಿರುವುದು ಏನು? ಪವಾಡಗಳನ್ನು ದೃಢೀಕರಣವೆಂದು ತಿಳಿಯಿರಿ. ಕಾಣದ ಕೈಯೊಂದಿದೆಯೆನ್ನುವುದನ್ನು ಅದು ದೃಢೀಕರಿಸುತ್ತದೆ. ಆ ಕೈಯನ್ನು ಹಿಡಿಯಲು ನಾವು ಪ್ರಯತ್ನಿಸಬೇಕು. ಆ ಕೈಗಳ ಹಿಂದೆ ವ್ಯಕ್ತಿಯಿದ್ದಾನೆ, ಪ್ರೀತಿಯಿದೆ; ಆ ಪ್ರೀತಿಯನ್ನು ನಾವು ಗುರುತಿಸಬೇಕು ಮತ್ತು ದೇವರೇ ಆದ ಆ ಮಹಾನ್ ಪ್ರೀತಿ, ಆ ಮಹಾನ್ ವ್ಯಕ್ತಿಯ ಮುಂದೆ ನಾವು ಶರಣಾಗಬೇಕು. ನಾವು ಅತ್ತಾಗಲೆಲ್ಲಾ ಅವನು ಕೇಳಿಸಿಕೊಳ್ಳುತ್ತಾನೆ. ನಾವು ರಕ್ಷಣೆ ಕೇಳಿದಾಗಲೆಲ್ಲಾ ರಕ್ಷಣೆ ದೊರೆಯುತ್ತದೆ. ನಮಗೆ ಸಹಾಯ ಬೇಕಾದಾಗಲೆಲ್ಲಾ ಸಹಾಯ ಸಿಗುತ್ತದೆ. ಬಸ್ ಹತ್ತಲು ಬಯಸಿದಾಗ ಬಸ್ ಸಿಗುತ್ತದೆ! ಈ ಅದ್ಭುತ ವ್ಯಕ್ತಿಯು ನಮಗೆ ಅತಿಮುಖ್ಯ ವ್ಯಕ್ತಿ. ನಮಗೆ ಅವನನ್ನು ನೋಡಲಾಗುವುದಿಲ್ಲವಾದ್ದರಿಂದ ಮೊದಲಿಗೆ ಅವನನ್ನು ನಾವು ಗುರುತಿಸಬೇಕು. ಅವನಿದ್ದಾನೆಂದು ನಮಗೆ ಮನದಟ್ಟಾಗಬೇಕು. ಅವನ ಅಸ್ತಿತ್ವದಲ್ಲಿ ನಮಗೆ ನಂಬಿಕೆಯಿರಬೇಕು. ಅವನೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕು. ಈ ಸಂಬಂಧ ಜನ್ಮಾಂತರಗಳವರೆಗೆ ಮುಂದುವರಿಯುತ್ತದೆ.

ನಾವು ಮಾನವ ಸಂಬಂಧಗಳನ್ನು ನೋಡಿದ್ದೇವೆ, ಅದರಲ್ಲೂ ಭಾವನೆಗಳನ್ನಾಧಾರಿತವಾದವುಗಳು. ಆದರೆ ಈ ಸಂಬಂಧವು ಭಾವನೆಗಳನ್ನು ಮತ್ತು ಬುದ್ಧಿಯನ್ನು ಮೀರಿದ್ದಾಗಿದ್ದು, ಇದು ನಿಜವಾದ ಸಂಬಂಧವಾಗಿದೆ. ಈ ಅದ್ಭುತ ವ್ಯಕ್ತಿಯಾದ ದೇವರೊಂದಿಗೆ ಸಂಬಂಧವನ್ನೇರ್ಪಡಿಸಿಕೊಳ್ಳುವುದು ನಮ್ಮ ಸಾಧನೆಯ ಪೂರ್ಣ ಉದ್ದೇಶವಾಗಿದೆ.

ಅನೇಕ ಬದಲಾವಣೆಗಳಾಗುತ್ತಿವೆ. ಈ ಬದಲಾವಣೆಗಳನ್ನು ನಾನು ಕಂಡಿದ್ದೇನೆ. ಯೋಗ ಅಥವಾ ಧ್ಯಾನದ ಬಗ್ಗೆ ಕೇಳಿಲ್ಲದಿದ್ದವರೂ ಕೂಡ ಈಗ ಧ್ಯಾನದ ಬಗ್ಗೆ ಮಾತನಾಡುತ್ತಾರೆ. ಧ್ಯಾನ ಮಾಡುವುದೊಂದು ಫ್ಯಾಷನ್ ಆಗಿದೆ. ಒಳ್ಳೆಯದು. ನಿಮ್ಮ ಖಿನ್ನತೆಯನ್ನು ಹೋಗಲಾಡಿಸಿಕೊಳ್ಳಲು ವ್ಯಕ್ತಿ ವಿಕಾಸ ತರಗತಿಗಳು, ತರಬೇತಿ ನೀಡುವ ಕ್ಯಾಂಪ್‌ಗಳು ಅನೇಕವಿವೆ. ಕಾರ್ಪೋರೇಟ್‌ಗಳಿಗೆ ಸಹಾಯವಾಗುವ ಅನೇಕ ಕಾರ್ಯಕ್ರಮಗಳಿವೆ. ಆದರೆ ಇವೆಲ್ಲವೂ ನಮ್ಮನ್ನು ಭಾಗಶಃ ಮಾತ್ರವೇ ಸಿದ್ಧಗೊಳಿಸುತ್ತವೆ. ಕೋರ್ಸಿನ ನಂತರ ನಮ್ಮ ಕಾರ್ಯಕ್ಷೇತ್ರಗಳಲ್ಲಿ ಹೆಚ್ಚು ಸಮರ್ಥರೆನ್ನಿಸಬಹುದು. ಈ ಕೋರ್ಸ್‌ಗಳು ಖಂಡಿತವಾಗಿಯೂ ಸಹಾಯಮಾಡುತ್ತವೆ. ಆದರೆ ಹೆಚ್ಚು ದುಬಾರಿಯಲ್ಲದ ಮತ್ತೊಂದು ಕೋರ್ಸ್ ಇದೆ. ಅದು ಸಪ್ತರ್ಷಿ ಧ್ಯಾನ ಯೋಗ. ಅಲ್ಲಿ ನಿಮ್ಮ ಸಂಪೂರ್ಣ ವ್ಯಕ್ತಿತ್ವವು ವಿಕಾಸಗೊಳ್ಳುತ್ತದೆ, ಒಬ್ಬ ಮ್ಯಾನೇಜರ್ ಆಗುವುದಷ್ಟೇ ಅಲ್ಲ! ಅಂತಹ ಸಣ್ಣ ಪಾತ್ರಗಳನ್ನು ವಹಿಸಲು ನಾವು ಜನ್ಮವೆತ್ತಿಲ್ಲ. ನಮ್ಮ ಪಾತ್ರಗಳು ಮಹಾನ್ ಪಾತ್ರಗಳು, ಬಹುದೊಡ್ಡ ಪಾತ್ರಗಳು. ನಾವು ಗುರುವಾಗಬಲ್ಲೆವು. ಎಂಥದೇ ಸಂದರ್ಭವನ್ನು ಸಮರ್ಪಕವಾಗಿ ಎದುರಿಸಲಾಗುವಂತಹ ಬದಲಾವಣೆಯನ್ನು ಧ್ಯಾನಾಭ್ಯಾಸವು ವ್ಯಕ್ತಿಯಲ್ಲಿ ತರುತ್ತದೆ.

ನನ್ನ ಗುರುವಿನ ಜೊತೆಯಲ್ಲಿ ಸದಾಕಾಲ ಸಾಧಾರಣವಾದ ಸಂಪರ್ಕವಿರುತ್ತದೆ. ಈ ಸಂಪರ್ಕವನ್ನು ಬಲಪಡಿಸಬೇಕೆನ್ನುವುದು ನನ್ನ ಗುರುವಿನ ಬಯಕೆ. ನನ್ನ ಗುರು ಹೀಗೆ ಹೇಳಿದಾಗಲೆಲ್ಲಾ ನನಗೆ ಭಯವಾಗುತ್ತದೆ. ಏಕೆಂದರೆ ಅವರು ನನ್ನಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತಾರೆ. ಆದ್ದರಿಂದ, ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕಾಗಿ ಬಲವಾದ ಸಂಪರ್ಕವನ್ನು ನಾನು ಏರ್ಪಡಿಸಿಕೊಳ್ಳಬೇಕು. ನಾನು ಬಹಳ ಕೆಲಸ ಮಾಡಬೇಕೆನ್ನುವುದು ಅವರ ಗುರಿಯಾಗಿದೆಯೆಂದು ನನಗೆ ತಿಳಿದಿದೆ. ಉನ್ನತ ಮಟ್ಟಗಳಲ್ಲಿ ಹೆಚ್ಚು ಕೆಲಸ ಕೊಡುತ್ತಾರೆ. ಅದರರ್ಥ ಇಲ್ಲಿ ಕೆಲಸ ಕಡಿಮೆ. ನಾನು ತರುಣನಾಗುತ್ತಿದ್ದೇನೆ!! ಸಹಜವಾಗಿಯೇ ನಾನು ಪ್ರಪಂಚದ ದಿನನಿತ್ಯದ ಚಟುವಟಿಕೆಗಳಿಂದ ಹಿಂದೆ ಸರಿಯಬೇಕಾಗಿದೆ, ಅದು ತಾನಾಗಿಯೇ ಘಟಿಸುತ್ತಿದೆ. ಪ್ರಜ್ಞಾಪೂರ್ವಕವಾಗಿಯೇ ನಾನು ಹಿಂದೆ ಸರಿಯುತ್ತಿದ್ದೇನೆ. ಮುಂದಿನ ಬಾರಿ ನೀವು ಪ್ರಶ್ನೆ ಕೇಳಿದಾಗ, ನನ್ನ ಪ್ರಬಲ ಸಂಪರ್ಕದ ಅನುಕೂಲತೆ ನಿಮಗೆ ಲಭಿಸುತ್ತದೆ. ನಾನು ಹಿಂದೆ ಸರಿಯಲು ಪ್ರಯತ್ನಿಸಿದಾಗಲೆಲ್ಲಾ ಅದು ನಿಮಗೆ ಹತ್ತಿರವಾಗುವುದಕ್ಕಾಗಿಯೇ ಆಗಿರುತ್ತದೆ. ಅದೊಂದು ವಿರೋಧಾಭಾಸ. ಜೀವನವಿರುವುದೇ ಹಾಗೆ. ನಿಮ್ಮನ್ನು ಹೆಚ್ಚು ಪ್ರೀತಿಸಿದಾಗ ನಿಮ್ಮಿಂದ ದೂರವಾಗುತ್ತೇನೆ. ಹಾಸ್ಯ ಮಾಡುತ್ತಾ ನಾವು ಕಾಲ ಕಳೆಯಬಹುದು. ಆದರೆ, ಈ ಪ್ರಬಲ ಸಂಪರ್ಕದ ಅನುಕೂಲತೆಯಿಂದಾಗಿ, ನಿಮಗೆ ಅವಶ್ಯವಿದ್ದಾಗ, ಋಷಿಗಳಿಂದ ಪಡೆದ ಉತ್ತಮ ಸಲಹೆಯನ್ನು ನಾನು ನಿಮಗೆ ನೀಡಬಹುದು. ಆದ್ದರಿಂದ ಪ್ರತಿಯೊಬ್ಬರಿಂದ ನಾನು ಹೆಚ್ಚು ದೂರವಾದ ಹಾಗೆಲ್ಲ ನಿಮಗೆ ಹೆಚ್ಚು ಹತ್ತಿರವಾಗುತ್ತೇನೆ. ನನ್ನ ಹೆಚ್ಚು ಕಾಳಜಿಯಿರುವುದು ನಿಮ್ಮ ಮೇಲೆ. ಇವೆಲ್ಲವನ್ನೂ ನೀವು ಅರ್ಥಮಾಡಿಕೊಳ್ಳಬೇಕೆಂದು ನಾನು ಬಯಸುತ್ತೇನೆ.

“ನಾನು ಈ ಕೆಲಸದಲ್ಲಿ ಭಾಗವಹಿಸಬೇಕೆಂದಿದ್ದೇನೆ, ಅದಕ್ಕೆ ನಾನೇನು ಮಾಡಬೇಕು?” ಎಂದು ಜನರು ಕೇಳಿದಾಗಲೆಲ್ಲಾ, “ಸಿದ್ಧಗೊಳ್ಳಿ” ಎಂದು ನಾನು ಹೇಳುತ್ತಾ ಬಂದಿದ್ದೇನೆ. ಎಷ್ಟು ಸಿದ್ಧಗೊಂಡರೂ ಅದು ಸಾಲದು. ನನಗಾಗಿ ಕೆಲಸಮಾಡುತ್ತಿರುವವರು ಉತ್ತಮರಾಗಿದ್ದಾರೆ. ಆದರೆ ಹೆಚ್ಚು ಸಿದ್ಧಗೊಂಡರೆ ನೀವು ಇನ್ನೂ ಹೆಚ್ಚು ಉತ್ತಮರಾಗಬಹುದು. ಸಿದ್ಧಗೊಳ್ಳುವುದು ಹೇಗೆ? ನಾವು ಹೆಚ್ಚು ಜ್ಞಾನವನ್ನು ಸಂಪಾದಿಸಬೇಕು. ನಮ್ಮ ಪುಸ್ತಕಗಳನ್ನು ಓದಿ ಅದರ ಜ್ಞಾನವನ್ನು ಪೂರ್ಣವಾಗಿ ಅರಿತುಕೊಳ್ಳಿ. ನಮ್ಮಲ್ಲಿ ಈಗಾಗಲೇ ಬಹಳ ಜ್ಞಾನವಿದೆ. ನೀವು ಇನ್ನೂ ಹೆಚ್ಚು ಪುಸ್ತಕಗಳನ್ನು ಓದಬೇಕು. ಇನ್ನೂ ಹೆಚ್ಚು ಜನರ ಮಾತುಗಳನ್ನು ಕೇಳಿಸಿಕೊಳ್ಳಬೇಕು, ನನ್ನ ಮಾತುಗಳನ್ನು ಮಾತ್ರವಲ್ಲ. ಹೊರಗಡೆ ಅನೇಕ ಅದ್ಭುತವಾದ ಕೆಲಸಗಳು ನಡೆಯುತ್ತಿವೆ. ಇವೆಲ್ಲವನ್ನೂ ನೀವು ಗಮನಿಸಬೇಕು. ಆದರೆ ಅದು ಕೂಡಾ ಸಾಲದು; ನಿಮ್ಮ ಒಳಗೆ ಹೋಗಬೇಕು. ಏಕಾಂತದಲ್ಲಿ ಕುಳಿತುಕೊಳ್ಳಲು ಸಮಯ ಮಾಡಿಕೊಳ್ಳಬೇಕು, ಸತ್ಯವನ್ನು ಅನುಭವಿಸಬೇಕು ಮತ್ತು ನೇರವಾಗಿ ಋಷಿಗಳಿಂದ ಹೆಚ್ಚು ಜ್ಞಾನವನ್ನು ಪಡೆಯಬೇಕು. ನೀವು ಪಡೆಯುವ ಈ ಅನುಭವವು ನಿಮ್ಮನ್ನು ದೇವರಂತಾಗಿಸುತ್ತದೆ – ಇದರಲ್ಲಿ ಉತ್ಪ್ರೇಕ್ಷೆಯಿಲ್ಲ. ಅನುಭವಿಸಿ ನೋಡಿ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

12-10-2014

ನಮ್ಮ ಲೈಟ್ ಚಾನಲಿಂಗ್ ಕಾರ್ಯಕರ್ತರೊಬ್ಬರಿಗೆ ಅಪಘಾತವಾಯಿತು. ಆಕೆಯ ದ್ವಿಚಕ್ರ ವಾಹನವು ಅವರ ಕಾಲುಗಳ ಮೇಲೆ ಬಿದ್ದು ನೋವುಂಟಾಯಿತು. ಆದರೂ ಗಾಯದ ಕಡೆಗೆ ಗಮನಕೊಡದೆ, ಲೈಟ್ ಚಾನಲಿಂಗ್ ಸೆಷನ್ ನಡೆಸಲು ಶಾಲೆಯೊಂದಕ್ಕೆ ಹೋದರು. ಅದು ಆಕೆಯ ಕೆಲಸದ ಮೇಲಿನ ಬದ್ಧತೆ! ಸೆಷನ್ ಪ್ರಾರಂಭಿಸಿದಾಗ ನೋವು ಮಾಯವಾಯಿತು! ನಂತರ, ವೈದ್ಯರ ಬಳಿಗೆ ಹೋಗಿ ಎಕ್ಸರೇ ತೆಗೆಸಿದಾಗ, ಮೂರು ಕಡೆ ಮೂಳೆ ಮುರಿದಿರುವುದು ತಿಳಿದುಬಂತು. ಇದು ನಂಬಲಸಾಧ್ಯವೆನಿಸುತ್ತದೆ! ಆಕೆ ಬದ್ಧತೆ ಮತ್ತು ಜವಾಬ್ದಾರಿಯ ಮನೋಭಾವದಿಂದ ನಿರ್ಧಾರ ತೆಗೆದುಕೊಂಡು ಕೆಲಸಕ್ಕೆ ಮುಂದಾದರು. ಋಷಿಗಳು ತಮ್ಮ ಕೃಪೆಯ ಮಳೆಗರೆದರು ಹಾಗೂ ಆಕೆಯ ಯೋಗಕ್ಷೇಮ ನೋಡಿಕೊಂಡರು.

ಈ ವಿಷಯವಾಗಿ ನಾನು ಯೋಚಿಸುತ್ತಿದ್ದೆ. ಋಷಿಗಳಿಗೆ ಅಪಘಾತವನ್ನು ಪೂರ್ಣವಾಗಿ ತಪ್ಪಿಸಲಾಗುವುದಿಲ್ಲವೇ? ಇದನ್ನು ಅನುಭವಿಸಲು ಆ ವ್ಯಕ್ತಿಗೇಕೆ ಹೇಳಬೇಕು? ಎಂದು ಜನರು ಕೆಲವೊಮ್ಮೆ ಕೇಳುತ್ತಾರೆ. ನಿಜಾಂಶವೆಂದರೆ ಅವರು ಅದನ್ನು ತಪ್ಪಿಸಬಲ್ಲರು. ಆದರೆ ಕೆಲವೊಮ್ಮೆ ನಾವು ಈಗ ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಕೆಲವು ಕಾರಣಗಳಿಂದಾಗಿ ಅಂಥವುಗಳನ್ನು ಸಂಪೂರ್ಣವಾಗಿ ತಪ್ಪಿಸಲಾಗುವುದಿಲ್ಲ. ಆಗ ಋಷಿಗಳು ಅಪಘಾತದ ತೀವ್ರತೆಯನ್ನು ಕಡಿಮೆಮಾಡುತ್ತಾರೆ. ಇಂತಹ ಘಟನೆಗಳನ್ನು ಗುರೂಜಿಯವರಿಗೆ ತಿಳಿಸಿದಾಗ, ಈ ಘಟನೆಯ ಮೂಲಕ ಮತ್ತಾವುದೋ ದೊಡ್ಡ ಘಟನೆಯೊಂದು ತಪ್ಪಿತೆಂದು ಹೇಳುತ್ತಿದ್ದರು.

ಸಾಧನೆಯೆಂದರೇನು? ಸಾಧನೆಯೆಂದರೆ ಸಾಮಾನ್ಯವಾಗಿ, ನಮ್ಮ ಗುರಿಯನ್ನು ತಲುಪಲು ಮಾಡುವ ಪ್ರಯತ್ನ. ನಮ್ಮ ಗುರಿ ಯಾವುದಾದರೂ ಆಗಬಹುದು, ಅದನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡಬೇಕಾಗಿಲ್ಲ. ಆಧ್ಯಾತ್ಮಿಕ ಸಾಧನೆಯ ವಿಷಯದಲ್ಲಿ, ಸಾಧನೆಯನ್ನು ಪ್ರಾರಂಭಿಸಲು ಯಾವುದಾದರೊಂದು ಕಾರಣವಿರಬಹುದು. ಅದು ಸಮಸ್ಯೆಯೊಂದನ್ನು ಬಗೆಹರಿಸಲು ಆಗಿರಬಹುದು. ಆದರೆ ನಾವು ಮುಂದುವರಿಯುತ್ತಾ ಹೋದಂತೆ ನಮ್ಮ ಗುರಿಯು ಸಮಸ್ಯೆಯೊಂದರಿಂದ ಇನ್ನೂ ಉನ್ನತವಾದುದರ ಕಡೆಗೆ ಬದಲಾಗುತ್ತದೆ. ಅಂತಿಮವಾಗಿ, ನಾವು ದೇವರೆಡೆಗೆ ಪಯಣಿಸಬಯಸುತ್ತೇವೆ. ಪರಿಪೂರ್ಣತೆಯೇ ದೇವರು. ನಂತರ ನಾವು ಅವನಾಗಬಯಸುತ್ತೇವೆ. ಸಾಧನೆಯನ್ನು ಬಿಡದೆ ಮುಂದುವರಿಸಿದರೆ, ಅಂತಿಮವಾಗಿ ನಾವು ಬೆಳಕಾಗುತ್ತೇವೆ, ದೇವರಾಗುತ್ತೇವೆ. ನಾವು ಬೆಳಕಾದರೆ, ಅದೇ ಜ್ಞಾನೋದಯ (enlightenment) ಎಂದು ಗುರೂಜಿಯವರು ಹೇಳುತ್ತಿದ್ದುದು ನನಗೆ ನೆನಪಿದೆ. ಜ್ಞಾನೋದಯವನ್ನೂ ಮೀರಿದ ಹಂತಗಳಿವೆಯೆಂದು ಗುರೂಜಿಯವರು ಹೇಳಿದ್ದರು. ಸಾಧನೆಗೆ ಕೊನೆಯೆಂಬುದಿಲ್ಲ. ಅದು ನಿರಂತರವಾಗಿ ಮುಂದುವರಿಯುತ್ತದೆ. ಸಾಧನೆಯನ್ನು ಬಿಡದಿದ್ದರೆ, ನಾವು ನಿರಂತರವಾಗಿ ಬೆಳೆಯುತ್ತಾ ಹೋಗಬಹುದು.

ಈ ಸಮಯದಲ್ಲಿ ಆಧ್ಯಾತ್ಮಿಕವಾಗಿ ಬೆಳೆಯುವುದೇ ನಮ್ಮ ಗುರಿ ಎಂದುಕೊಳ್ಳೋಣ. ಸಾಧನೆಯಲ್ಲಿ ಎರಡು ಭಾಗಗಳಿವೆ. ಅಭ್ಯಾಸಗಳನ್ನು ಮಾಡುವುದು ಒಂದು ಭಾಗ ಅಂದರೆ ಧ್ಯಾನಮಾಡುವುದು ಮತ್ತುಲೈಟ್ ಚಾನಲಿಂಗ್ ಮಾಡುವುದು. ಮತ್ತೊಂದು ಭಾಗವೆಂದರೆ ಜೀವನವನ್ನು ನಡೆಸುವ ಭಾಗ – ಆಧ್ಯಾತ್ಮಿಕ ಜೀವನವನ್ನು ನಡೆಸುವುದು, ನಮ್ಮ ನಿಜವಾದ ಗುಣವನ್ನು ಜೀವನದಲ್ಲಿ ಹೊರತರುವುದು. ಅದು ಹೇಗೋ ನಮ್ಮ ಆತ್ಮದೊಂದಿಗಿನ ಸಂಪರ್ಕವನ್ನು ನಾವು ಕಳೆದುಕೊಂಡಿರುವುದರಿಂದ, ಆತ್ಮದ ಸಹಜ ಗುಣದಂತೆ ನಮಗೆ ಬದುಕಲಾಗುತ್ತಿಲ್ಲ. ನಾವೀಗ ಪ್ರಜ್ಞಾಪೂರ್ವಕವಾಗಿ ಈ ಸಂಪರ್ಕವನ್ನು ಮರುಸ್ಥಾಪಿಸಿಕೊಳ್ಳಬೇಕು.

ಅಭ್ಯಾಸ ಮಾಡುವ ಮತ್ತು ಬಾಳುವ ಈ ಎರಡು ಭಾಗಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಧ್ಯಾನಾಭ್ಯಾಸವು ಆತ್ಮದೊಂದಿಗೆ ಸಂಪರ್ಕವನ್ನು ಮರುಸ್ಥಾಪಿಸಲು ನಮಗೆ ಸಹಾಯ ಮಾಡುತ್ತದೆ. ಧ್ಯಾನದಲ್ಲಿ ಸ್ಥಾಪಿಸಿಕೊಂಡ ಈ ಸಂಪರ್ಕವನ್ನು ನಾವು ಕಡೆಗಣಿಸಿ ಅಹಂನ ಮಾರ್ಗದರ್ಶನದಲ್ಲಿ ಹಿಂದಿನ ರೂಢಿಯಂತೆಯೇ ಬದುಕುವುದನ್ನು ಮುಂದುವರಿಸಿದರೆ, ಸಂಪರ್ಕವನ್ನು ಮತ್ತೊಮ್ಮೆ ಕಳೆದುಕೊಳ್ಳುತ್ತೇವೆ. ಆದ್ದರಿಂದಲೇ ಸಾಧನೆಯ ಎರಡೂ ಭಾಗಗಳು ಅತೀ ಮುಖ್ಯ. ಈ ಎರಡು ಭಾಗಗಳಲ್ಲಿ ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು. ಸಾಧನೆಯೆಂದರೆ ಪ್ರಯತ್ನ. ನಾವು ನಿಧಾನವಾಗಿ ಮುಂದುವರೆದಂತೆಲ್ಲ ಧ್ಯಾನದಲ್ಲಿ ಹೆಚ್ಚು ಸಮಯ ಕುಳಿತುಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಮತ್ತೊಂದು ಭಾಗವಾದ ಬದುಕಿನ ಭಾಗದಲ್ಲಿ, ಆಧ್ಯಾತ್ಮಿಕ ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ನಾವು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು. ನಾವು ಸಾಧಾರಣ ಜನರಲ್ಲ ಎಂಬ ಅರಿವನ್ನು ಪ್ರಜ್ಞಾಪೂರ್ವಕವಾಗಿ ಕಾಪಾಡಿಕೊಳ್ಳಬೇಕು. ನಾವು ದೇವರದೇ ಭಾಗವಾಗಿದ್ದೇವೆ. ವಾಸ್ತವದಲ್ಲಿ ಅದೊಂದು ಪವಿತ್ರವಾದ ವಿಷಯ, ಮಹಾನ್ ವಿಷಯ. ನಮ್ಮೊಳಗೆ ಮತ್ತು ನಮ್ಮ ಸುತ್ತಲೂ ಬೆಳಕಿದೆಯೆಂಬ ಅರಿವಿನಲ್ಲಿರಬೇಕೆಂದು ಗುರೂಜಿಯವರು ನಮಗೆ ಹೇಳುತ್ತಿದ್ದರು. ಆಗ ನಾವು ಬೆಳಕಿನ ಸಂಪರ್ಕದಲ್ಲಿದ್ದು ಅತ್ಯುತ್ತಮವಾಗಿ ಬದುಕುತ್ತೇವೆ.

ಸಾಧನೆಯ ಎರಡೂ ಭಾಗಗಳಲ್ಲಿ ಪ್ರಯತ್ನಗಳನ್ನು ಮಾಡಲು ಸಹಾಯವಾಗುವಂತಹ ಕೆಲವು ವಿಷಯಗಳನ್ನು ನಾನು ಹಂಚಿಕೊಳ್ಳ ಬಯಸುತ್ತೇನೆ. ಇಂತಹ ವಿಷಯಗಳನ್ನು ನಾನು ಹಂಚಿಕೊಂಡ ಪ್ರತಿಸಲವೂ, ನಾನು ಇವುಗಳನ್ನು ಅಧಿಕಾರಯುಕ್ತವಾಗಿ ಹೇಳುತ್ತಿದ್ದೇನೆಂದು ನೀವು ತಿಳಿಯಬಾರದೆಂದು ಕೇಳಿಕೊಳ್ಳುತ್ತೇನೆ. ನನಗೆ ಅಂತಹ ಅಧಿಕಾರವಿಲ್ಲ. ನನ್ನ ಸಾಧನೆಯಲ್ಲಿನ ಹೋರಾಟವನ್ನು ಆಧರಿಸಿದ, ನನ್ನ ನ್ಯೂನತೆಗಳು ಮತ್ತು ನನ್ನ ದುರ್ಬಲತೆಗಳನ್ನು ನಾನು ಅರ್ಥಮಾಡಿಕೊಂಡಿರುವುದನ್ನಾಧರಿಸಿದ ನನ್ನ ತಿಳುವಳಿಕೆಯನ್ನಷ್ಟೇ ಹಂಚಿಕೊಳ್ಳುತ್ತಿದ್ದೇನೆ. ಆದ್ದರಿಂದ ನಾನು ಈ ರೀತಿಯಲ್ಲಿ ಮಾತನಾಡಿದಾಗ, ನಾನು ಉತ್ತಮಪಡಿಸಿಕೊಳ್ಳಬೇಕೆಂದು ನನಗೆ ತಿಳಿದಿರುವ ವಿಭಾಗಗಳನ್ನು ನಿಮ್ಮಲ್ಲಿ ಹಂಚಿಕೊಳ್ಳಲು ಪ್ರಯತ್ನಿಸುತ್ತಿರುತ್ತೇನೆ. ಈ ನಿಯಮಗಳನ್ನು ನಾನು ಬಳಸಲು ಪ್ರಯತ್ನಿಸಿದಾಗಲೆಲ್ಲಾ ಅದು ನನಗೆ ಸಹಾಯ ಮಾಡಿದೆಯೆನ್ನುವುದನ್ನು ನಾನು ಒಪ್ಪಿಕೊಳ್ಳಬೇಕು. ಆ ಕಾರಣದಿಂದ ಸಾಧಕನೊಬ್ಬನ ಆತ್ಮವಿಶ್ವಾಸದಿಂದ, ಅದು ಸಹಾಯ ಮಾಡುತ್ತದೆಯೆಂದು ನಾನು ಹೇಳಬಲ್ಲೆ. ಈ ನಿಯಮಗಳನ್ನು ಇನ್ನೂ ಹೆಚ್ಚು ತೀವ್ರವಾಗಿ ಮತ್ತು ಪೂರ್ಣವಾಗಿ ಆಚರಣೆಗೆ ತರಬೇಕೆನ್ನುವುದರ ಅರಿವು ನನಗಿದೆ. ಅದು ನನ್ನ ಹೋರಾಟವಾಗಿದೆ. ಸಾಧನೆಗೆ ಸಹಾಯಮಾಡುವ ಕೆಲವು ಅಂಶಗಳು ಹೀಗಿವೆ:

ಮೊದಲನೆಯದು ಪ್ರೀತಿ. ಗುರೂಜಿಯವರು ಪ್ರೀತಿಯ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಅವರು ಪ್ರೀತಿಯೇ ಆಗಿದ್ದರು. ಅವರ ವ್ಯಕ್ತಿತ್ವದ ಪ್ರತಿಯೊಂದು ಅಣುವೂ ಪ್ರೀತಿಯಿಂದ ತುಂಬಿತ್ತು. ನಾವು ಮಾಡುವ ಪ್ರತಿಯೊಂದರಲ್ಲೂ ಪ್ರೀತಿಯನ್ನು ಹೊರಸೂಸುತ್ತಿದ್ದರೆ, ನಮ್ಮ ಅಭ್ಯಾಸದ ಗುಣಮಟ್ಟವು ಹೆಚ್ಚುತ್ತದೆ. ದೇವರನ್ನು ನಾವು ಪ್ರೀತಿಸುತ್ತೇವೆ. ದೇವರ ಬಳಿಗೊಯ್ಯುವ ಸಾಧನವಾದ ಧ್ಯಾನವನ್ನು ನಾವು ಪ್ರೀತಿಸುವುದಾದರೆ ನಮ್ಮ ಧ್ಯಾನದ ಗುಣಮಟ್ಟವು ಉತ್ತಮವಾಗುತ್ತದೆ. ದೇವರ ಬಗ್ಗೆ, ಬೆಳಕಿನ ಬಗ್ಗೆ ಸ್ವಲ್ಪ ಮಟ್ಟಿಗೆ ಭಾವುಕರಾಗಿ ಎಂದು ಗುರೂಜಿಯವರು ಹೇಳುತ್ತಿದ್ದುದು ನನಗೆ ನೆನಪಿದೆ.

ಅದೇ ರೀತಿ ನಮಗೆ ಜೀವನವನ್ನು ಪ್ರೀತಿಸಲು ಸಾಧ್ಯವಾದರೆ, ಜೀವನದ ಗುಣಮಟ್ಟವೂ ಕೂಡಾ ಉತ್ತಮಗೊಳ್ಳುತ್ತದೆ. 'ಜೀವನವೇ ದೇವರು' ಎಂದು ಒಮ್ಮೆ ಸೋಮಯಾಜಿ ಹೇಳಿದ್ದು ನೆನಪಿದೆ. ಆದ್ದರಿಂದ, ಶೀಘ್ರವಾದ ಆಧ್ಯಾತ್ಮಿಕ ಪ್ರಗತಿಗೆ ಪ್ರೀತಿ ಕೀಲಿಕೈ ಆಗಿದೆ. ನಮ್ಮ ಎಲ್ಲ ಆಯ್ಕೆಗಳು ಪ್ರೀತಿಯನ್ನಾಧರಿಸಿದ್ದರೆ ಜೀವನವು ಸಂತೋಷ–ಭರಿತವಾಗುತ್ತದೆ, ಹಿತವಾಗಿರುತ್ತದೆ. ನಮ್ಮ ಸುತ್ತಲಿನ ಜನರನ್ನು ಪ್ರೀತಿಸಿದರೆ ನಮ್ಮಿಂದ ಪ್ರೀತಿಯ ತರಂಗಗಳು ಹೊರಹೊಮ್ಮುತ್ತವೆ. ದೈವೀ ಪ್ರೀತಿಯಲ್ಲಿ, ಶರತ್ತು ರಹಿತ ಪ್ರೀತಿಯಲ್ಲಿ ಹೊಂದಾಣಿಕೆ ಮಾತ್ರವಿರುತ್ತದೆ. ಅದರಲ್ಲಿ ಒತ್ತಾಯಗಳಿರುವುದಿಲ್ಲ ಮತ್ತು ನಿರೀಕ್ಷೆಗಳಿರುವುದಿಲ್ಲವೆಂದು ನಮಗೆ ತಿಳಿದಿದೆ. ಪ್ರೀತಿಯಲ್ಲಿ ನಾವು ಎಲ್ಲವನ್ನೂ ಒಪ್ಪಿಕೊಳ್ಳುತ್ತೇವೆ.

ಸಾಧನೆಗೆ ಸಹಾಯಮಾಡುವ ಮತ್ತೊಂದು ಅಂಶವೆಂದರೆ ನಂಬಿಕೆ – ನಮ್ಮಲ್ಲಿ ನಂಬಿಕೆ, ಗುರುವಿನಲ್ಲಿ ನಂಬಿಕೆ, ಮಾರ್ಗದಲ್ಲಿ ನಂಬಿಕೆ, ಅಭ್ಯಾಸಗಳಲ್ಲಿ ನಂಬಿಕೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು –ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಹರ್ಷಿ ಅಮರ – ನಮ್ಮ ಮಾಸ್ಟರ್

**ಶೋಭಾ ಕೆ. ರಾವ್; ಅನು: ಪಾಂಡುರಂಗ**

ಕಲಿಯುಗದಲ್ಲಿ ಮಹಾನ್ ಆಧ್ಯಾತ್ಮಿಕ ಮಾಸ್ಟರ್‌ಗಳು ಮನುಕುಲವನ್ನು ಮಾರ್ಗದರ್ಶಿಸಲು ಮತ್ತು ಅವರ ಆಧ್ಯಾತ್ಮಿಕ ಉದ್ಧಾರಕ್ಕಾಗಿ ಭೂಮಿಯ ಮೇಲೆ ಮತ್ತೆ ಮತ್ತೆ ಹುಟ್ಟಿ ಬರುತ್ತಾರೆ. ಮಹಾನ್ ಮಹರ್ಷಿ ಅಮರರವರು ಸಹ ಮಹಾರಾಷ್ಟ್ರದ ಸಂತರುಗಳಾದ ಏಕ್‌ನಾಥ್ ಮಹಾರಾಜ್ ಮತ್ತು ಗೋರ ಕುಂಬಾರರಾಗಿ ಹಾಗೂ ಇನ್ನೂ ಅನೇಕ ಪುನರ್ಜನ್ಮಗಳನ್ನೆತ್ತಿದ್ದಾರೆ. ಅಮರರವರು ಆಯಾ ಕಾಲಕ್ಕೆ ಅನುಗುಣವಾದ ವಿಷಯಗಳ ಬಗ್ಗೆ ಜನರಿಗೆ ತಿಳಿಸಿದರು ಮತ್ತು ಆ ಸಮಯಗಳಲ್ಲಿ ಅವಶ್ಯವೆನಿಸುವಂಥವುಗಳನ್ನು ಮಾತ್ರ ಅಭ್ಯಾಸ ಮಾಡಿಸುತ್ತಿದ್ದರು.

ನಂತರ ಈ ಮಹಾನ್ ಋಷಿಯು ಮತ್ತೆ 1919ರಲ್ಲಿ ಅಮರರವರಾಗಿ ಭೂಮಿಗೆ ಬಂದು ತಮ್ಮ ಹನ್ನೆರಡನೆಯ ವಯಸ್ಸಿನಿಂದಲೇ ಋಷಿಗಳ ಕೆಲಸಗಳನ್ನು ಮಾಡಲು ಪ್ರಾರಂಭಿಸಿದರು. ಅವರರವರು 1974 ಏಪ್ರಿಲ್‌ನಲ್ಲಿ ಕಲಿಯುಗ ಅಂತ್ಯಗೊಂಡ ಪ್ರಕ್ರಿಯೆಯನ್ನು ವೀಕ್ಷಿಸಿದರು. ಬಹುಶಃ ನಾವು ಮಾತ್ರವೇ ಈ ವಿಷಯವನ್ನು ಅರಿತಿದ್ದೇವೆ. ಆ ದಿನಗಳಿಂದಲೇ ಅವರು ಹಳೇ ವಿಧಾನಗಳಿಂದ ಪೂಜಿಸುವುದನ್ನು ಬಿಟ್ಟು ಬಿಡುವಂತೆ ಮನುಕುಲವನ್ನು ಮಾರ್ಗದರ್ಶಿಸಿದರು. ಮತ್ತು ನೇರ ಮತ್ತು ಸರಳವೆನಿಸುವ ಉನ್ನತ ಮಟ್ಟದ ದಾರಿಗಳನ್ನು ಪರಿಚಯಿಸಿದರು. ಋಷಿಗಳನ್ನು ಮತ್ತು ಧ್ಯಾನವನ್ನು ನಮ್ಮಲ್ಲಿಗೆ ತಂದರು. ಯಾವುದೇ ರೀತಿಯ ಪೂಜೆಯಾದರೂ ಅದರ ಉದ್ದೇಶ ದೇವರ ಸಂಪರ್ಕ ಪಡೆಯುವುದು ಮತ್ತು ಆತನ ಅನುಭವ ಪಡೆಯುವುದಾಗಿರಬೇಕೆಂದು ನಮಗೆ ಅರಿವು ಮೂಡಿಸಿದರು. ಇದಕ್ಕಾಗಿ, ಮೊದಲಿಗೆ ನಾವು ನಮ್ಮಲ್ಲಿ ಮತ್ತು ನಮ್ಮ ಹೊರಗೆ ದೇವರು ಇದ್ದಾನೆಂದು ಕಂಡುಕೊಳ್ಳಬೇಕು. ಅವರು ಕೊಟ್ಟಿರುವ ಧ್ಯಾನವನ್ನು ನಿರಂತರವಾಗಿ ಅಭ್ಯಾಸ ಮಾಡುವುದರಿಂದ ಸರ್ವ ಜೀವರಾಶಿಯೊಂದಿಗೆ ಏಕತ್ವವನ್ನನುಭವಿಸುವ ದೈವೀ ಸ್ಥಿತಿಯನ್ನು ತಲುಪುತ್ತೇವೆ. ಹಾಗೂ ಅಮರರವರೇ ಆ ಸ್ಥಿತಿಯಾಗಿದ್ದರು.

ಋಷಿಗಳ ಕೆಲಸಕ್ಕಾಗಿ ಮಹರ್ಷಿ ಅಮರರವರಲ್ಲಿದ್ದ ಸಮರ್ಪಣಾ ಭಾವ ಮತ್ತು ಬದ್ಧತೆ ಪ್ರಶಂಸನೀಯ. ಅಮರರವರ ಅತೀಂದ್ರಿಯ ಸಾಹಸಗಳು ಭವಿಷ್ಯತ್ತಿನ ಪುರಾಣಗಳಾಗುತ್ತವೆಂದು ಗುರೂಜಿಯವರು ಹೇಳಿದ್ದಾರೆ. ಜನರಿಗೆ ಅಮರರವರನ್ನು ಅರಿತುಕೊಳ್ಳಲಾಗಲಿಲ್ಲ. ಅವರ ಹೃದಯ ವೈಶಾಲ್ಯತೆಯ ಬಗ್ಗೆ ಮತ್ತು ಅವರಲ್ಲಿ ಸಾಗರದಂತೆ ಇದ್ದ ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ಜನರಿಗೆ ಅರಿಯಲಾಗಲಿಲ್ಲ. ಹೀಗಿದ್ದರೂ ಅಮರರವರು, “ನಾನು ಕೇವಲ ಋಷಿಗಳ ಕೈಯಲ್ಲಿರುವ ಸಾಧನವಷ್ಟೆ” ಎಂದು ವಿನಯದಿಂದ ಹೇಳುತ್ತಿದ್ದರು. ಅದು ಅವರಲ್ಲಿದ್ದ ವಿನಯತೆ!

ಅಮರರವರ ಜೀವನದ ಪ್ರತಿಯೊಂದು ಅಂಶವೂ ಅವರ ಗೌರವಾನ್ವಿತ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತಿದ್ದವು. ಅಮರ ಎಂಬ ಸರ್ವೋತ್ಕೃಷ್ಟ ದೈವೀ ಸ್ಥಿತಿಯನ್ನು ತಲುಪಲು ನಾವು ಧ್ಯಾನ ಮಾಡೋಣ ಮತ್ತು ಅವರಲ್ಲಿದ್ದ ಸರಳತೆ ಮತ್ತು ವಿನಯವಂತಿಕೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ. ■

## ಮಹರ್ಷಿ ಅಮರ

**ಅಭಿಲಾಷಿತಾ ವಿನಯ್; ಅನು: ವರ್ಷಾ ದೀಪಕ್**

ಗುರೂಜಿಯವರು ಅಮರರವರನ್ನು ಪರಿಚಯಿಸಿದ ಅನೇಕರಲ್ಲಿ ನಾನೂ ಒಬ್ಬಳು. ನಿಸ್ಸಂಶಯವಾಗಿ ಅಮರರವರ ಬಗ್ಗೆ ನಾನು ಬರೆದಾಗ, ನನ್ನ ಪದಗಳಲ್ಲಿ ಗುರೂಜಿಯವರು ತಮ್ಮ ಉಪನ್ಯಾಸಗಳ ಹಾಗೂ ತಮ್ಮ ಜೀವನದ ಮೂಲಕ ನಮ್ಮೆಲ್ಲರೊಂದಿಗೆ ಹಂಚಿಕೊಂಡಿರುವ ಅವರ ಪದಗಳು ಮತ್ತು ಆಲೋಚನೆಗಳು ಪ್ರತಿಬಿಂಬಿಸುತ್ತವೆ!

ಅಮರರವರ ಅತ್ಯಂತ ಸ್ಫೂರ್ತಿದಾಯಕವಾದ ಆಸ್ಟ್ರಲ್ ಕೆಲಸಗಳಿಗೆ ಮತ್ತು ಸಾಮರ್ಥ್ಯಗಳಿಗೆ ನಾವು ಯಾರೂ ಅಪರಿಚಿತರಲ್ಲ. ಆದರೆ ನಾವು ಅವರ ಜೀವನದ ಬಗ್ಗೆ ಚಿಂತನೆ ಮಾಡಿದಾಗ, ಅವರ ಜೀವಮಾನದ ಕೆಲಸ ಹಾಗೂ ವ್ಯಕ್ತಿತ್ವವು ನಮಗೆ ಪಾಠಗಳಾಗುತ್ತವೆ, ನಂತರದಲ್ಲಿ ಅವುಗಳು, ಒಬ್ಬ ವ್ಯಕ್ತಿಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಒಂದು ಮೌಲ್ಯಾಧಾರಿತ ವ್ಯವಸ್ಥೆಯಾಗುತ್ತವೆ.....

ದೈವೀ ವ್ಯಕ್ತಿತ್ವದ ಅಮರರವರಂಥ ಮಹಾನ್ ಮಾಸ್ಟರ್‌ಗಳನ್ನು ಕೇವಲ ಪದಗಳಿಂದ ಎಂದಿಗೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅವರು ಯಾವುದೇ ವ್ಯಕ್ತಿಯ ಗ್ರಹಣಶಕ್ತಿಯನ್ನು ಮೀರಿದವರಾಗಿದ್ದಾರೆ. ಅವರ ಎಲ್ಲಾ ಅಸ್ತಿತ್ವಕ್ಕೆ ಮತ್ತು ಪ್ರತಿಪಾದನೆಗಾಗಿ ಅವರಿಗೆ ಸಂಪೂರ್ಣವಾಗಿ ನ್ಯಾಯ ಒದಗಿಸುವ ರೀತಿಯಲ್ಲಿ ಅವರನ್ನು ಎಂದಿಗೂ ವರ್ಣಿಸಲಾಗದು. ಅವರನ್ನು ಕೇವಲ ಅನುಭವಿಸಬಹುದಷ್ಟೆ.

ಕಾಲದ ಮರಳಿನಲ್ಲಿ ಶಾಶ್ವತವಾಗಿರುವ ಅಮರರವರನ್ನು ‘ಸಾವಿಲ್ಲದವರು’ ಎಂದು ಅತಿ ಸಮರ್ಪಕವಾಗಿ ಗುರೂಜಿಯವರು ವಿವರಿಸಿದ್ದಾರೆ. ಅವರದು ಬಹು ಮುಖ ವ್ಯಕ್ತಿತ್ವ; ಅವುಗಳಲ್ಲಿ ಕೆಲವು– ಶ್ರೇಷ್ಠ ಮಹಾಋಷಿ, ಅಸಾಧಾರಣ ಋಷಿಗಳ ಕಾರ್ಯಕರ್ತ, ಜ್ಞಾನ ಮತ್ತು ವಿವೇಕದ ಮೂಲ ಮತ್ತು ಸಮಸ್ತ ಜನರಿಗೆ ದಾರಿ ದೀಪ. ಆದರೆ ಎಲ್ಲಕ್ಕಿಂತಲೂ ಮುಖ್ಯವಾಗಿ ಅಮರರವರು ಒಂದು ತತ್ವಚಿಂತನೆ, ಸತ್ಯತೆ, ಬದುಕುವ ದಾರಿ, ಒಂದು ತತ್ವ! ನಾವು ಅವರನ್ನು ಹೆಚ್ಚು ಹೆಚ್ಚು ಅನುಭವಿಸಿದಂತೆ ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳುತ್ತೇವೆ ಮತ್ತು ಅಮರ ಎಂಬ ಚೈತನ್ಯದ ವಿಶಾಲ ಕ್ಷೇತ್ರಕ್ಕೆ ಹಾಗೂ ಯಾವುದೇ ಷರತ್ತಿಲ್ಲದ ದೈವೀ ಪ್ರೀತಿಗೆ ಇನ್ನೂ ಹತ್ತಿರವಾಗುತ್ತೇವೆ.

ಅಮರರವರು ನಮ್ಮನ್ನು ಋಷಿಗಳಿಗೆ, ಜ್ಞಾನಕ್ಕೆ ಮತ್ತು ಶಂಬಲದ ಅಸ್ತಿತ್ವಕ್ಕೆ ಪರಿಚಯಗೊಳಿಸಿದ ದ್ವಾರವಾಗಿದ್ದಾರೆ ಹಾಗೂ ಎಲ್ಲರೂ ಅರ್ಥ–ಮಾಡಿಕೊಳ್ಳಲು, ಜೀವಿಸಲು, ಅನುಭವಿಸಲು ಮತ್ತು ಅಭಿವ್ಯಕ್ತಿಸಲು ಆಧ್ಯಾತ್ಮಿಕ ಜ್ಞಾನವನ್ನು ಅವರು ಅತ್ಯಂತ ಸರಳೀಕರಿಸಿದ್ದಾರೆ. ಅವರು ಯಾವಾಗಲೂ ತಮ್ಮ ಜೀವಿತ ಕಾಲಕ್ಕಿಂತ ಬಹು ಮುಂದೆ ಇದ್ದರು. ಅವರು ವಿನಮ್ರತೆ ಮತ್ತು ಯಾವುದೇ ಷರತ್ತಿಲ್ಲದ ಪ್ರೀತಿಯ ಸಾಕಾರವಾಗಿದ್ದರು. ಅವರೇ ಪರಿಪೂರ್ಣತೆ!! ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಜೀವನದಲ್ಲಿ ಪರಿಪೂರ್ಣ ಸಮತೋಲನವನ್ನು ಸಾಧಿಸುವವರಿಗೆ ಅವರೇ ಸ್ಫೂರ್ತಿ. ಅದು ಅವರಿಗೆ ಸಹಜವಾಗಿ ಬಂದಿತ್ತು.

ಮಹರ್ಷಿ ಅಮರರವರು ಎಂದೆಂದಿಗೂ ನಾವು ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ತಲುಪಬೇಕಾಗಿರುವ ಗುರಿಯಾಗಿದ್ದಾರೆ ಮತ್ತು ಆಗಿರುತ್ತಾರೆ! ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನಾವು ಬೇರೆಯವರನ್ನು ಪ್ರೀತಿಸುವಾಗ, ನಮ್ಮನ್ನು ನಾವು ಪ್ರೀತಿಸುತ್ತೇವೆಯೇ?**

ಉ: ನಾವು ನಿಜವಾಗಿಯೂ ಧ್ಯಾನ ಮತ್ತು ಲೈಟ್ ಚಾನಲಿಂಗ್ ಮಾಡುತ್ತಿದ್ದರೆ, ಅದು ಪ್ರತಿಯೊಬ್ಬರನ್ನೂ ಪ್ರೀತಿಸುವಂತಹ ಮತ್ತು ಇಡೀ ಸೃಷ್ಟಿಯನ್ನು ಪ್ರೀತಿಸುವಂತಹ ಸ್ಥಿತಿಗೆ ಹಾಗೂ ಉನ್ನತ ಮಟ್ಟಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಆದರೆ ಸಾಮಾನ್ಯವಾಗಿ, ಅಂತಹ ಪ್ರಭಾವಗಳು ಕೆಲಸ ಮಾಡಲು ನಾವು ಅವಕಾಶ ಕೊಡುವುದಿಲ್ಲ. ನಾವು ಯಾವಾಗಲೂ ನಮ್ಮನ್ನಷ್ಟೇ ಪ್ರೀತಿಸುತ್ತೇವೆ.

**ಪ್ರ: ನಾವು ದೇವರನ್ನು ಪ್ರೀತಿಸುತ್ತೇವೆಯೇ?**

ಉ: ನಿಮಗೆ ನೀವೇ ಪ್ರಶ್ನಿಸಿಕೊಳ್ಳಿ. ನೀವು ಆತ್ಮಸಾಕ್ಷಿಯ ಕನ್ನಡಿ ಮುಂದೆ ನಿಂತುಕೊಂಡಾಗ ಈ ಪ್ರಶ್ನೆಯನ್ನು ಕೇಳಿಕೊಳ್ಳಿ, ಆಗ ನಿಮಗೆ ನೀವು ಎಷ್ಟು ಪ್ರಮಾಣದಲ್ಲಿ ದೇವರನ್ನು ಪ್ರೀತಿಸುತ್ತಿದ್ದೀರೆಂದು ತಿಳಿಯುತ್ತದೆ.

**ಪ್ರ: ಧರ್ಮವನ್ನು ದಾಟಿ ಹೋಗುವುದೆಂದರೇನು?**

ಉ: ಧರ್ಮದ ಎಲ್ಲ ಅಗತ್ಯತೆಗಳನ್ನು ಪಾಲಿಸಿ. ಮೊದಲು ಅವುಗಳನ್ನು ಅರ್ಥ ಮಾಡಿಕೊಳ್ಳಿ. ಅದರಲ್ಲಿ ಬಹಳಷ್ಟು ವಿಷಯುಗಳನ್ನು ತಿರುಚಲಾಗಿದೆ, ಕಾಲಾನಂತರದಲ್ಲಿ ಬಹಳಷ್ಟು ಅನಾವಶ್ಯಕವಾದುವುಗಳನ್ನು ಸೇರಿಸಲಾಗಿದೆ. ನಾವು ಅವುಗಳನ್ನು ಬಿಟ್ಟು ಬಿಡಬೇಕು ಮತ್ತು ಅವುಗಳನ್ನು ದಾಟಿ ಹೋಗಬೇಕು.

**ಪ್ರ: ಖಿನ್ನತೆಯ ಮತ್ತು ಆನಂದಪರವಶತೆಯ ಸ್ಥಿತಿಗಳನ್ನು ಹೇಗೆ ನಿಭಾಯಿಸಬೇಕು?**

ಉ: ನಾವು ಆನಂದಪರವಶದ ಉನ್ನತ ಮಟ್ಟಗಳಿಗೆ ಹೋದಾಗಲೆಲ್ಲ ಕೆಳ ಮಟ್ಟದ ಖಿನ್ನತೆಗಳಿಗೂ ಹೋಗಬೇಕಾಗುತ್ತದೆಯೆನ್ನುವ ಒಂದು ನಿಯಮವಿದೆ. ನೀವು ಧ್ಯಾನಾಭ್ಯಾಸ ಮಾಡಿದರೆ, ನಿಮ್ಮಲ್ಲಿ ಇದನ್ನು ನಿಭಾಯಿಸಲು ಬೇಕಾಗುವಷ್ಟು ವಿವೇಕ ಮತ್ತು ಧೈರ್ಯ ಇರುತ್ತದೆ. ನೀವು ಆನಂದಪರವಶರಾಗಿದ್ದಾಗ, ಆ ಮಟ್ಟವನ್ನು ಆತ್ಮದ ಮಟ್ಟಕ್ಕೆ ಬದಲಾಯಿಸಿಕೊಳ್ಳಿ. ಆತ್ಮದ ಮಟ್ಟದಲ್ಲಿ ಅದನ್ನು ಆನಂದಿಸಿ. ಆಗ, ನೀವು ಕೆಳ ಮಟ್ಟದ ಖಿನ್ನತೆಗೆ ಒಳಗಾಗಬೇಕಾಗುವ ನಿಯಮವು ಅನ್ವಯಿಸುವುದಿಲ್ಲ. ಇದೊಂದು ತುಂಬ ಸ್ವಾರಸ್ಯಕರ ವಿಷಯ.

**ಪ್ರ: ಒಬ್ಬ ವ್ಯಕ್ತಿಯನ್ನು ಸಂಪರ್ಕಿಸುವುದು, ಒಬ್ಬ ವ್ಯಕ್ತಿಯು ಬಗ್ಗೆ ಯೋಚಿಸುವುದಕ್ಕಿಂತ ಬೇರೆಯಾಗಿದೆಯೆ?**

ಉ: ಅವೆರಡೂ ಬೇರೆ ಬೇರೆ. ಯಾವಾಗ ನಾವು ಒಬ್ಬ ವ್ಯಕ್ತಿಯ ಬಗ್ಗೆ ಯೋಚಿಸುತ್ತೇವೆಯೋ, ಆಗ ನಮ್ಮ ಮನಸ್ಸು ಅಕ್ಷರಶಃ ವಿಸ್ತರಿಸಿ ಆತನ ಅಥವಾ ಆಕೆಯ ಮನಸ್ಸಿನ ಜೊತೆಗೆ ಸಂಪರ್ಕ ಪಡೆಯುತ್ತದೆ. ಆದರೆ ಯಾವಾಗ ನಾವು ಒಬ್ಬ ವ್ಯಕ್ತಿಯೊಂದಿಗೆ ಸಂಪರ್ಕ ಹೊಂದಲು ಪ್ರಯತ್ನಿಸುತ್ತೇವೆಯೋ, ಆಗ ನಾವು ಅದನ್ನು ಯಾವ ಷರತ್ತುಗಳು ಮತ್ತು ಯಾವ ಪೂರ್ವಾಗ್ರಹಗಳಿಲ್ಲದ ಆತ್ಮದ ಮಟ್ಟದಿಂದ ಮಾಡುತ್ತೇವೆ. ಒಂದು ವೇಳೆ ನಾವು ಆತ್ಮದ ಮಟ್ಟದಿಂದ ವ್ಯಕ್ತಿಯನ್ನು ನಿಜವಾಗಿಯೂ ಸಂಪರ್ಕಿಸಿದರೆ, ನಮಗೆ ಅತ್ಯಂತ ಸಂತೋಷವಾಗುತ್ತದೆ ಮತ್ತು ಒಂದು ರೀತಿಯ ಪರಿಪೂರ್ಣತೆಯ ಅನುಭವವಾಗುತ್ತದೆ. ಆತ್ಮದ ಮಟ್ಟದ ಸಂಪರ್ಕದಲ್ಲಿ ದೂರ ಮಾಯವಾಗಿರುತ್ತದೆ. ಆದ್ದರಿಂದ ಸಂವಹನದ ಅವಶ್ಯಕತೆ ಇರುವುದಿಲ್ಲ. ಇದೊಂದು ಎರಡು ಆತ್ಮಗಳ ಸೌಹಾರ್ದತೆಯಾಗಿರುತ್ತದೆ. ನಾವು ಇದನ್ನು ಎಲ್ಲರೊಂದಿಗೆ ಅಭ್ಯಾಸ ಮಾಡಬೇಕು, ಆಗ ಯಾವುದೇ ರೀತಿಯ ತಪ್ಪು ತಿಳುವಳಿಕೆಗಳಿರುವುದಿಲ್ಲ ಮತ್ತು ಯಾವುದೇ ರೀತಿಯ ನಕಾರಾತ್ಮಕತೆಗಳಿಗೆ ಆಸ್ಪದವಿರುವುದಿಲ್ಲ.

**ಪ್ರ: ನಿಮ್ಮ ವಿದ್ಯಾರ್ಥಿಗಳೊಂದಿಗೆ ಯಾವ ಮಟ್ಟದಿಂದ ವ್ಯವಹರಿಸಲು ಬಯಸುತ್ತೀರಿ?**

ಉ: ಎಲ್ಲಾ ಮಟ್ಟಗಳಿಂದಲೂ. ಮಾನವ ಮಟ್ಟದಿಂದಲೂ, ಬುದ್ಧಿ ಮಟ್ಟದಿಂದಲೂ, ಭಾವನೆ ಮಟ್ಟದಿಂದಲೂ, ಮತ್ತು ಆತ್ಮ ಮಟ್ಟದಿಂದಲೂ ಕೂಡಾ ನಾನು ಸಂಪರ್ಕಿಸುತ್ತೇನೆ. ನಾನು ಹೆಚ್ಚಾಗಿ ಆತ್ಮ ಮಟ್ಟದಿಂದಲೇ ಸಂಪರ್ಕಿಸಲು ಇಷ್ಟಪಡುತ್ತೇನೆ. ನಾನು ಒಬ್ಬ ವ್ಯಕ್ತಿಯ ಜೊತೆಗೆ ಈ ಎಲ್ಲ ಮಟ್ಟಗಳಿಂದಲೂ, ವ್ಯವಹರಿಸಬಹುದು. ಇದು ಸಾಧ್ಯವಿದೆ.

**ಪ್ರ: ಒಬ್ಬ ವ್ಯಕ್ತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಯಾವುದು ಸಹಾಯ ಮಾಡುತ್ತದೆ?**

ಉ: ಮೊದಲು ಆ ವ್ಯಕ್ತಿಯ ಮಾತುಗಳನ್ನು ಆಲಿಸಿ. ಯಾವಾಗ ನೀವು ಆಲಿಸುತ್ತೀರೋ, ಸಹಜವಾಗಿ ನೀವು ಅವರನ್ನು ಗೌರವಿಸುತ್ತೀರಿ. ಆತ ಸರಿ ಇರಬಹುದು ಅಥವಾ ತಪ್ಪು ಇರಬಹುದು. ತಪ್ಪು ಮಾಡುವುದಕ್ಕೂ ಆತನಿಗೆ ಹಕ್ಕಿದೆ. ಆದಕಾರಣ ನೀವು ತೀರ್ಮಾನಿಸಬೇಡಿ, ಟೀಕೆ ಮಾಡಬೇಡಿ, ಅಥವಾ ಸಲಹೆ ನೀಡಬೇಡಿ. ನಿಮ್ಮಲ್ಲಿ ಪ್ರೀತಿ ಮತ್ತು ಬೆಳಕನ್ನು ಯಾವಾಗಲೂ ಹೊಂದಿದ್ದರೆ ನೀವು ಯಾರನ್ನಾದರೂ ಅರ್ಥಮಾಡಿಕೊಳ್ಳಬಹುದು.

**ಪ್ರ: ಋಷಿಗಳು ಏಕೆ ನಮಗೆ ಕಾಣಿಸಿಕೊಳ್ಳುವುದಿಲ್ಲ?**

ಉ: ಅದರ ಅವಶ್ಯಕತೆ ಇಲ್ಲ.

**ಪ್ರ: ಲೈಟ್ ಚಾನಲಿಂಗ್ ಮಾಡುವುದಕ್ಕೆ ಬ್ರಹ್ಮಚರ್ಯ ಅವಶ್ಯವೇ?**

ಉ: ಲೈಟ್ ಚಾನಲಿಂಗ್ ಮಾಡುವುದಕ್ಕೆ ಬೇಕಾಗಿರುವುದು ನಿಮ್ಮ ಆಶಯ ಅಷ್ಟೆ.


**ಪ್ರ: ಋಷಿಗಳ ಮಾರ್ಗ ಸೇರಲು ನಮ್ಮಲ್ಲಿ ಯಾವ ಅರ್ಹತೆಗಳಿರಬೇಕು?**

ಉ: ಋಷಿಗಳ ಮಾರ್ಗ ಸೇರಲು ನಮ್ಮಲ್ಲಿ ಪ್ರೀತಿ, ಬದ್ಧತೆ, ಮತ್ತು ವಿನಮ್ರತೆಯೆಂಬ ಅರ್ಹತೆಗಳು ಇರಬೇಕು. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಒಮ್ಮೆ ನನ್ನ ಕನಸಿನಲ್ಲಿ ಒಂದು ಅತಿದೊಡ್ಡ ಅಂತರಿಕ್ಷ ವಾಹನ ಭೂಮಿಗೆ ಇಳಿಯುತ್ತಿದ್ದುದನ್ನು ಕಂಡು ಭಯವಾಗಿ, ನಾನು ಋಷಿಗಳು ಹಾಗೂ ಗುರೂಜಿಯವರನ್ನು ನೆನಪಿಸಿಕೊಂಡೆ. ಅದು ನನ್ನೊಡನೆ ಇನ್ನೂ ಕೆಲವರನ್ನು ಹತ್ತಿಸಿಕೊಂಡು ಮತ್ತೆ ಮೇಲೇರತೊಡಗಿತು. ಆ ಅಂತರಿಕ್ಷವಾಹನದೊಳಗೆ, ಹೊಸಯುಗಕ್ಕೆ ನಮ್ಮನ್ನು ತಯಾರಿಮಾಡಲು ನಮ್ಮ ಮನಸ್ಸುಗಳನ್ನು ಶುದ್ಧಗೊಳಿಸಲಾಯಿತು. ಹಿಂದೊಮ್ಮೆ ನನಗೆ ಇದೇ ಅನುಭವವಾಗಿದ್ದ ನೆನಪಾಯಿತು ಹಾಗೂ ಬಹುಶಃ ನನಗೆ ಮತ್ತೊಮ್ಮೆ ಶುದ್ಧಗೊಳ್ಳುವ ಅವಶ್ಯಕತೆ ಇದ್ದಿರಬಹುದು. ನಂತರ ನನ್ನನ್ನು ಮರಳಿ ಈ ಭೂಮಿಗೆ ಬಿಡಲಾಯಿತು. ಎದ್ದು ನೋಡಿದಾಗ ನನ್ನೊಳಗೆಲ್ಲಾ ನೀಲಿಯ ಬೆಳಕು ಆವರಿಸಿತ್ತು. ನನ್ನೆಲ್ಲಾ ಕುಂದುಕೊರತೆಗಳ ಹೊರತಾಗಿಯೂ ಹೊಸಯುಗದೆಡೆಗೆ ಸಾಗುವೆನೆಂಬ ಭರವಸೆ ಮೂಡಿತು.

– ಕೀರ್ತಿ ಬಿಸರಹಳ್ಳಿ

ನವೆಂಬರ್ 21ರಂದು ಸಾಯಂಕಾಲ ಪ್ರತಿದಿನದಂತೆ ನಾನು ಋಷಿಗಳನ್ನು ಸಂಪರ್ಕಿಸುವ ಸೆಷನ್‌ನ ಅಭ್ಯಾಸಕ್ಕೆ ಕುಳಿತೆ. ಅಂದು ವಿಪರೀತ ಶೀತದ ಬಾಧೆ ಇದ್ದುದರಿಂದ ಮೂಗುಕಟ್ಟಿ ಉಸಿರಾಟ ಕಷ್ಟವಾಗಿ ಅತ್ಯಂತ ಆಯಾಸಗೊಂಡಿದ್ದೆ. ಅಂದು ನನಗೆ ಆ ತಂತ್ರದ ಅಭ್ಯಾಸ ಮಾಡಲು ಸಾಧ್ಯವಿಲ್ಲವೆಂದುಕೊಂಡೆ. ತಕ್ಷಣ ಏನೋ ಚಮತ್ಕಾರ ನಡೆದಂತೆ, ಕಟ್ಟಿಕೊಂಡಿದ್ದ ಮೂಗು ತೆರೆದುಕೊಂಡು, ಸರಾಗವಾಗಿ ಉಸಿರಾಡಲು ಸಾಧ್ಯವಾಯಿತು! ನಂತರ ಸುಮಾರು 20–30 ನಿಮಿಷಗಳವರೆಗೆ ಆ ತಂತ್ರವನ್ನು ಅಭ್ಯಾಸ ಮಾಡಿದೆ ಮತ್ತು ಋಷಿಗಳು ಹಾಗೂ ಗುರೂಜಿಯವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿದೆ.

– ಲಕ್ಷ್ಮಿ ಒ.ಎಸ್.

ಈಗ ನನ್ನಲ್ಲಿ ಬದಲಾವಣೆಯಾಗಿದೆ. ನಾನು ಯಾವುದೇ ಒತ್ತಡವಿಲ್ಲದೆ ಅತ್ಯಂತ ಪ್ರಶಾಂತಳಾಗಿರುತ್ತೇನೆ. ನಾನು ಯಾವುದೇ ಪರಿಸ್ಥಿತಿಯಲ್ಲಿದ್ದರೂ ಬೆಳಕು ಸದಾ ನನ್ನನ್ನು ಕಾಪಾಡುತ್ತದೆಯೆಂಬ ಅಚಲವಾದ ನಂಬಿಕೆ ನನಗಿದೆ. ನನ್ನನ್ನು ಬೆಳಕಿಗೆ ಒಪ್ಪಿಸಿಕೊಂಡಿದ್ದೇನೆ. ಬೆಳಕಿನೊಂದಿಗೆ ಮಾತನಾಡಿ ಉತ್ತರಕ್ಕಾಗಿ ಕಾಯುತ್ತೇನೆ.

– ಪ್ರತಿಭಾ ಪಟೇಲ್

ಜೀವನದ ಕೆಲವು ಸಂದರ್ಭಗಳಲ್ಲಿ ಸಾಕ್ಷೀಭೂತ–ಳಾಗಿರುವುದು ಸಹಜವಾಗುತ್ತಿದೆ. ಆ ಕ್ಷಣಗಳು ಅತ್ಯಂತ ಪ್ರಶಾಂತವಾಗಿ, ಸಮಾಧಾನಕರವಾಗಿರುತ್ತವೆ.

– ಶಾಂತ ಕುಮಾರಿ ಹೆಚ್.ಎಸ್.

ಕೆಲವು ದಿನಗಳ ಹಿಂದೆ ನಾನು ತೀವ್ರ ಮೈಕೈ ನೋವು, ತಲೆನೋವು ಮತ್ತು ಅತಿಯಾದ ಜ್ವರದ ತಾಪದಿಂದ ಬಳಲುತ್ತಿದ್ದೆ. ಔಷಧೋಪಚಾರದಿಂದ ಏನೂ ಪ್ರಯೋಜನವಾಗಿರಲಿಲ್ಲ. ರಾತ್ರಿಯಲ್ಲಿ ಜ್ವರ ಜಾಸ್ತಿಯಾಗಿ, ನಡುಗಲು ಪ್ರಾರಂಭಿಸಿದೆ. ಗುರೂಜಿಯವರಿಗೆ ಸಹಾಯ ಮಾಡುವಂತೆ ದೈನ್ಯದಿಂದ ಬೇಡಿಕೊಂಡೆ. ಆಶ್ಚರ್ಯವೆಂದರೆ ಮರುದಿನವೇ ಜ್ವರ ಕಡಿಮೆಯಾಗಿ ಎದ್ದು ಕುಳಿತುಕೊಳ್ಳಲು ನನಗೆ ಸಾಧ್ಯವಾಯಿತು. ಈಗ ನನಗೆ ಋಷಿಗಳು ಹಾಗೂ ದೈವೀಶಕ್ತಿಯ ಬಗೆಗಿನ ನಂಬಿಕೆ ದುಪ್ಪಟ್ಟಾಗಿದೆ.

– ಶೋಭಾ ಹಿರೇಮಠ್

ನನ್ನ ಧ್ಯಾನದಿಂದಾಗಿ ಇಡೀ ದಿನ ನಾನು ಭಾರೀ ಪ್ರಮಾಣದಲ್ಲಿ ವಿಸ್ತಾರಗೊಂಡಿರುತ್ತೇನೆ ಹಾಗೂ ಪ್ರಶಾಂತಳಾಗಿರುತ್ತೇನೆ. ಅಪರೂಪಕ್ಕೆ ಕಳವಳಗೊಂಡರೆ ಅದು ನನ್ನ ಒಳಗೇ ಇರುತ್ತದೆ. ಆಗ, ಯಥಾ ದೃಷ್ಟಿ ಹಾಗೂ ಸಮಚಿತ್ತವನ್ನು ಮರಳಿ ಪಡೆಯುವುದಕ್ಕಾಗಿ ಮತ್ತು ದೇಹ, ಮನಸ್ಸು, ಬುದ್ಧಿಗಳನ್ನು ಕೂಡಲೇ ಚೈತನ್ಯೀಕರಿಸಿಕೊಳ್ಳುವುದಕ್ಕಾಗಿ ನನ್ನಲ್ಲಿ ಬೆಳಕನ್ನು ತುಂಬಿಸಿಕೊಳ್ಳುವುದರ ಮೂಲಕ ಮತ್ತು ಗುರೂಜಿಯವರು ಕೊಟ್ಟಿರುವ ಇತರೆ ತಂತ್ರಗಳನ್ನು ಅಭ್ಯಾಸಮಾಡುವುದರ ಮೂಲಕ ನಿಭಾಯಿಸುತ್ತೇನೆ.

– ವಿದ್ಯಾ ವೀರ್‌ಕರ್

ಧ್ಯಾನ ಮಾಡುವಾಗ ನಾನು ಹೃದಯದಿಂದ ವಿಸ್ತರಿಸಿದಂತೆನಿಸುತ್ತದೆ. ನನ್ನ ಹೃದಯದಿಂದ ಬೆಳಕಿನ ಅಲೆಗಳು ಹೊರಬಂದಂತೆ ಮತ್ತು ಹೊರಮುಖವಾಗಿ ಹೋಗುತ್ತಿರುವಂತೆ ಅನಿಸುತ್ತದೆ. ನನ್ನೊಳಗೆ ಬೆಳಕು ತುಂಬಿರುವಂತೆನಿಸುತ್ತದೆ. ಒಳಗಿರುವ ಆ ಬೆಳಕು ಹೆಚ್ಚು ಪ್ರಕಾಶಗೊಳ್ಳುತ್ತಾ ಹೋಗುತ್ತದೆ. ನನ್ನ ದೇಹ ಹಗುರ ಹಾಗೂ ಪಾರದರ್ಶಕವಾಗಿ ಬೆಳಕನ್ನು ಹೊರಹೊಮ್ಮಿಸುತ್ತದೆ.

– ಸಂಜಯ್ ಮನೋಹರ್

ನನ್ನ ಮಗ ವರುಣ ಮತ್ತು ಅವನ ಪುಟ್ಟ ಸ್ನೇಹಿತ ಭೌಮಿಕ್, ಚೆನ್ನೈನಲ್ಲಿ ಒಂದು ಸ್ಥಳೀಯ ರೈಲನ್ನು ಹತ್ತಿದರು. ಆದರೆ ಅತ್ಯಂತ ಜನದಟ್ಟಣೆಯಿದ್ದ ಕಾರಣ ನನಗೆ ಹತ್ತಲಾಗಲಿಲ್ಲ. ವರುಣನಿಗೆ ಅದರ ಅರಿವಾಗಿ ನನ್ನ ಜತೆಗೂಡಲು ತಕ್ಷಣ ರೈಲಿನಿಂದ ಇಳಿದುಬಿಟ್ಟ. ಆದರೆ ಪುಟಾಣಿ ಭೌಮಿಕ್‌ಗೆ ಇಳಿಯಲಾಗಲಿಲ್ಲ ಮತ್ತು ರೈಲು ಮುಂದೆ ಹೊಯಿತು. ಕೂಡಲೆ ನಾನು ದೇವರನ್ನು ಹಾಗೂ ಋಷಿಗಳನ್ನು ಬೇಡಿಕೊಂಡೆ. ತಕ್ಷಣ ಸಂದರ್ಭವು ಆಶ್ಚರ್ಯಕರ ರೀತಿಯಲ್ಲಿ ಬದಲಾಯಿತು. ಆರಕ್ಷಕರೊಬ್ಬರು ಖುದ್ದಾಗಿ, ಓರ್ವ ಮಹಾತ್ಮನಿಂದ ರಕ್ಷಿಸಲ್ಪಟ್ಟ ಭೌಮಿಕ್‌ನನ್ನು ಇರಿಸಿದ್ದ ಆರಕ್ಷಕ ಠಾಣೆಗೆ ನಮ್ಮನ್ನು ಕರೆದುಕೊಂಡು ಹೋದರು. ನಾವು ದೇವರಿಗೆ, ಋಷಿಗಳಿಗೆ ಹಾಗೂ ಗುರೂಜಿಯವರಿಗೆ ನಮ್ಮ ವಿನಮ್ರ ನಮನಗಳನ್ನರ್ಪಿಸಿದೆವು.

– ಕಲ್ಪನಾ ಮಂಚಿಕಾಂತಿ

ನನ್ನ ಬುದ್ಧಿ ಹಾಗೂ ಮನಸ್ಸನ್ನು ಹಿಡಿತದಲ್ಲಿಟ್ಟು–ಕೊಂಡು ನಾನು ಅತ್ಯಂತ ಪ್ರಶಾಂತನಾಗಿದ್ದೇನೆ. ನಾನು ಕರ್ತನೆಂಬ ಭಾವನೆಯನ್ನು ತ್ಯಜಿಸಿದ್ದೇನೆ. ನಾನು ಈ ದೇಹವಲ್ಲ ಎಂಬುದನ್ನು ಅರಿತಿದ್ದೇನೆ.

– ಅನುರಾಗ್ ಸಿಂಗ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ